# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಫೆಬ್ರವರಿ 15, 2023

ಸಂಪುಟ : 49 ಸಂಚಿಕೆ : 274 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಇಲ್ಲಿವರೆಗೆ ತೌಡು ಕುಟ್ಟಿದ ಸರ್ಕಾರ

### ವಿಧಾನಸಭೆಯಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ



ಬೆಂಗಳೂರು, ಫೆ. 14 - ಬಿಜೆಪಿ ನೇತೃತ್ವದ ಸರ್ಕಾರ ಸುಳ್ಳು ಹೇಳಿಕೊಂಡೇ ಕಾಲ ಕಳೆದಿದೆಯೇ ಹೊರತು, ಅಭಿವೃದ್ಧಿ ಕಡೆಗೆ ಗಮನ ಹರಿಸಿಲ್ಲ. ಇಲ್ಲಿಯವರೆಗೂ ತೌಡು ಕುಟ್ಟುವ ಕೆಲಸ ಮಾಡಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ವಾಗ್ದಾಳಿ ನಡೆಸಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದಲ್ಲಿ ನೀಡಿದ ಯಾವುದೇ ಭರವಸೆಗಳನ್ನು ಈಡೇರಿಸಿಲ್ಲ ಎಂದು ದಾಖಲೆ ಸಹಿತ ಎಳೆ ಎಳೆಯಾಗಿ ಸದನದಲ್ಲಿ ಬಿಡಿಸಿಟ್ಟರು.

ದಿನನಿತ್ಯ ಭರವಸೆಗಳ ಮಹಾಪೂರವನ್ನೇ ಹರಿಸುವ ಮೂಲಕ ಜನರನ್ನು ವಂಚಿಸುತ್ತಿದ್ದಾರೆಯೇ ಹೊರತು ಅಭಿವೃದ್ಧಿ ಶೂನ್ಯ ಎಂದು ಆರೋಪಿಸಿದರು.

ರಾಜ್ಯಪಾಲರ ಭಾಷಣವೆಂದರೆ ಸರ್ಕಾರದ ಕೈಗನ್ನಡಿಯಾಗಿರಬೇಕು. ಆದರೆ, ಇದು ಸುಳ್ಳಿನ ಕನ್ನಡಿಯಾಗಿದೆ. ಇಂತಹ ಭಾಷಣವನ್ನು ನಾನು ಎಂದೂ ನೋಡಿರಲಿಲ್ಲ.

ನೀವು ಏನಾದರೂ ಸಾಧನೆ ಮಾಡಿದ್ದರಲ್ಲವೇ? ಭಾಷಣದಲ್ಲಿ ಸೇರಿಸಲು ಸಾಧ್ಯ. ಈ ಪುಸ್ತಕವೇ ನಿಮ್ಮ ಸುಳ್ಳಿನ ಕಂತೆಯನ್ನು ಬಯಲು ಮಾಡುತ್ತದೆ ಎಂದು ಟೀಕಾ ಪ್ರಹಾರ ನಡೆಸಿದರು.

2018ರಲ್ಲಿ ಬಿಜೆಪಿ ರಾಜ್ಯದ ಜನರಿಗೆ 600 ಭರವಸೆಗಳನ್ನು ನೀಡಿತ್ತು, ಅದರಲ್ಲಿ ಈ ವರೆಗೆ 50 ರಿಂದ 60 ಭರವಸೆಗಳನ್ನು ಕೂಡ ಪೂರ್ಣ ಈಡೇರಿಸಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಬಡವರ, ರೈತರ, ಅವಕಾಶ ವಂಚಿತರ (2ನೇ ಪುಟಕ್ಕೆ)

## ಫೆ.17ರಂದು ರಾಜ್ಯ ಬಜೆಟ್ ಮಂಡನೆ

ಬೆಂಗಳೂರು, ಫೆ. 14 - 2023-24ನೇ ಆರ್ಥಿಕ ಸಾಲಿನ ಆಯವ್ಯಯವನ್ನು ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಮುಂದಿನ ಶುಕ್ರವಾರ ಫೆ.17ರ ಬೆಳಗ್ಗೆ 10.15ಕ್ಕೆ ಮಂಡನೆ ಮಾಡಲಿದ್ದಾರೆ ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ವಿಧಾನಸಭೆಯಲ್ಲಿ ಘೋಷಿಸಿದರು.

ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಧಾರವನ್ನು ಸದನದಲ್ಲಿ ಪ್ರಕಟಿಸಿದ ಅವರು, ಫೆ. 20ರಂದು ಸಂಜೆ 4 ಗಂಟೆಗೆ ವಿಧಾನಸೌಧದ ಮುಂಭಾಗ 15ನೇ ವಿಧಾನಸಭೆಯ ಸದಸ್ಯರ ಛಾಯಾಚಿತ್ರ ತೆಗೆಸಿಕೊಳ್ಳುವ ಕಾರ್ಯಕ್ರಮ ನಿಗದಿಯಾಗಿದ್ದು, ಪ್ರತಿಯೊಬ್ಬರು ಕಡ್ಡಾಯವಾಗಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಇಂದು ಮತ್ತು ನಾಳೆ ರಾಜ್ಯಪಾಲರು ಭಾಷಣದ ಮೇಲೆ ಚರ್ಚೆಗೆ ಸಮಯ ನಿಗದಿ ಮಾಡಲಾಗಿದೆ. ಫೆ.16ರಂದು ಪ್ರಶ್ನೋತ್ತರ ಅವಧಿ ಮುಗಿದ ರಾಜ್ಯ ಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಮುಖ್ಯಮಂತ್ರಿ ಉತ್ತರ ನೀಡಲಿದ್ದಾರೆ.

ಬಜೆಟ್ ಮಂಡನೆಯಾದ ನಂತರ ಫೆ.20, 21, 22ರಂದು ಬಜೆಟ್ ಮೇಲಿನ ಚರ್ಚೆ ನಡೆಯಲಿದೆ. ಫೆ.23ರಂದು ಪ್ರಶ್ನೋತ್ತರ ವೇಳೆ ಬಳಿಕ ಮುಖ್ಯಮಂತ್ರಿ ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಲಿದ್ದಾರೆ. ಬಜೆಟ್‌ಗೆ ಅಂಗೀಕಾರ ಪಡೆಯುವ ಪ್ರಕ್ರಿಯೆ ನಡೆಯಲಿದೆ. ಈಗಾಗಲೇ ನಿಗದಿಯಾಗಿರುವಂತೆ ಫೆ.24 ರಂದು ಅಧಿವೇಶನದ ಕೊನೆಯ ದಿನವೆಂದು ಹೇಳಿದರು.

# ಸೂರಗೊಂಡನಕೊಪ್ಪಕ್ಕೆ 10 ಕೋಟಿ ರೂ.

### ಶ್ರೀ ಸಂತ ಸೇವಾಲಾಲ್ ಜಯಂತಿ ಉದ್ಘಾಟಿಸಿದ ಮುಖ್ಯಮಂತ್ರಿ ಬೊಮ್ಮಾಯಿ ಘೋಷಣೆ



ಹೊನ್ನಾಳಿ, ಫೆ. 14 - ಸೂರಗೊಂಡನಕೊಪ್ಪದ ಶ್ರೀ ಸಂತ ಸೇವಾಲಾಲ್ ಕ್ಷೇತ್ರದ ಅಭಿವೃದ್ಧಿಗೆ 10 ಕೋಟಿ ರೂ. ಅನುದಾನವನ್ನು ಪ್ರಾಧಿಕಾರಕ್ಕೆ ಕಾಯ್ದಿರಿಸಿ ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ನ್ಯಾಮತಿ ತಾಲ್ಲೂಕಿನ ಸೂರಗೊಂಡನಕೊಪ್ಪದಲ್ಲಿ ಮಂಗಳವಾರ ಆಯೋಜಿಸಿದ್ದ ಶ್ರೀ ಸಂತ ಸೇವಾಲಾಲ್ ಅವರ 284ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಂಜಾರ ಸಮಾಜ. ವೈಶಿಷ್ಟ್ಯ ಪೂರ್ಣವಾದ ಸಮಾಜ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಹರಡಿರುವ ಏಕೈಕ ಸಮಾಜ. ಅತ್ಯಂತ ಬುದ್ದಿವಂತ ಸಮಾಜ. ಎಲ್ಲ ರಂಗಗಳಲ್ಲೂ ಈ ಸಮಾಜದವರು ಸಾಧನೆ ಮಾಡಿದ್ದಾರೆ ಎಂದರು.

ನಿಮ್ಮ ಬುದ್ದಿವಂತಿಕೆಗೆ ಹೆಚ್ಚಿನ ಅವಕಾಶ ನೀಡುವ ನಿಟ್ಟಿನಲ್ಲಿ ಮೀಸಲಾತಿಯ ಪ್ರಮಾಣವನ್ನು ಹೆಚ್ಚಳ ಮಾಡಲಾಗಿದೆ. ಪರಿಶಿಷ್ಟ ಜಾತಿಗೆ ಶೇ.15 ರಿಂದ ಶೇ.17ಕ್ಕೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ.3 ರಿಂದ 7 ರವರೆಗೆ ಹೆಚ್ಚಳ ಮಾಡಲಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ಈ ಸಮಾಜದವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಬಹು ದೊಡ್ಡ ಅವಕಾಶಗಳು ದೊರೆಯಲಿವೆ ಎಂದು ಹೇಳಿದರು.

ಬರುವ ಮಾರ್ಚ್ ತಿಂಗಳಲ್ಲಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನಲ್ಲಿ ಕಂದಾಯ ಗ್ರಾಮಗಳಾಗಿ ಪರಿವರ್ತಿತವಾಗಿರುವ ತಾಂಡಾಗಳ 52 ಸಾವಿರ ಫಲಾನುಭವಿಗಳಿಗೆ ಹಕ್ಕುಪತ್ರ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದರು.

ತಾಂಡಾ ಅಭಿವೃದ್ಧಿಗೆ ನಮ್ಮ ಸರ್ಕಾರ ವಿಶೇಷ ಆದ್ಯತೆ ನೀಡಿದೆ. ತಾಂಡ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ ಈ ನಿಗಮದ ಮೂಲಕ ತಾಂಡಗಳ ಅಭಿವೃದ್ಧಿಗೆ ರೂ.961 ಕೋಟಿ ಅನುದಾನ ನೀಡಲಾಗಿದೆ ಎಂದರು

ಸಮಾಜದ ಬೇಡಿಕೆಗೆ ಸರ್ಕಾರ ಎಲ್ಲ ನೆರವನ್ನು ಒದಗಿಸಲಿದೆ. ಬಂಜಾರ ಸಮುದಾಯದ ಕೆಲಸಕ್ಕೆ ವಲಸೆ ಹೋಗುವ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಅನುಕೂಲವಾಗಲೂ ಈ ಸಮುದಾಯದ ಜನಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ವಿಶೇಷ ವಸತಿ ಶಾಲೆಗಳನ್ನು ಆರಂಭಿಸಲಾಗುವುದು. ವಿಶೇಷ ಅಭಿವೃದ್ದಿ ಅನುದಾನದಲ್ಲಿ ಕಂದಾಯ ಗ್ರಾಮಗಳಾಗಿ ಪರಿವರ್ತನೆಯಾಗಿರುವ ಗ್ರಾಮಗಳ ವಸತಿ ರಹಿತ ವಸತಿ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು ಯುವಕರಿಗೆ ಉದ್ಯೋಗ ಅವಕಾಶ ಕಲ್ಪಿಸಲು ಲೀಡಕರ್ ಮಾದರಿಯಲ್ಲಿ ಶೇಡ್ ಗಳನ್ನು ನಿರ್ಮಾಣ ಮಾಡಿಕೊಡಲಾಗುವುದು.

ಕೊಪ್ಪಳ ಜಿಲ್ಲೆಯ ಬಹದ್ದೂರ್ ಬಂಡಾ ಪ್ರದೇಶದಲ್ಲಿ ಹೆರಿಟೇಜ್ ವಿಲೇಜ್ ಸ್ಥಾಪನೆ, ಬೀದರ್‌ನಲ್ಲಿ ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆಗೆ ಕಾಯಕಯೋಜನೆಯಡಿ ಬಂಜಾರ ಕೌಶಲ್ಯಗಳ ಪ್ರೋತ್ಸಾಹಕ್ಕೆತಲಾ 50 ಸಾವಿರ ನೆರವು ಸೇರಿದಂತೆ ಈ ಸಮಾಜದ ಅಭಿವೃದ್ಧಿಗೆ ಸರ್ಕಾರ ಎಲ್ಲ ಅವಕಾಶಗಳನ್ನು ಒದಗಿಸಲಿದೆ ನಿಮ್ಮ ಅಭಿವೃದ್ದಿಯಲ್ಲಿ ನಮ್ಮ ಸರ್ಕಾರ ನಿಮ್ಮ ಜೊತೆಯಲ್ಲಿ ಇರಲಿದೆ ಎಂದರು. (2ನೇ ಪುಟಕ್ಕೆ)

### ಶೃಂಗಾರಗೊಂಡ ಶ್ರೀ ಕ್ಷೇತ್ರ

ಸಂತ ಶ್ರೀ ಸೇವಾಲಾಲ್ ಮಹಾರಾಜರ ಜಯಂತಿ ಅಂಗವಾಗಿ ಸುತ್ತಲೂ ಗುಡ್ಡಗಳಿಂದ ಆವೃತ್ತವಾಗಿರುವ ಶ್ರೀ ಕ್ಷೇತ್ರದಲ್ಲಿ ವಿದ್ಯುತ್ ದೀಪಾಲಂಕಾರ, ಹೂವಿನ ಅಲಂಕಾರ, ತಳಿರು ತೋರಣಗಳಿಂದ ಮನಸೆಳೆಯುತ್ತಿದೆ. ದೇವಸ್ಥಾನ ಆವರಣ, ವೇದಿಕೆಗಳು, ಜಾತ್ರಾ ಸ್ಥಳ ಸೇರಿದಂತೆ ಶ್ರೀ ಕ್ಷೇತ್ರ ಅಲಂಕಾರದಿಂದ ಶೃಂಗಾರಗೊಂಡಿದೆ. ಎಲ್ಲೆಡೆ ಮಾಲಾಧಾರಿಗಳು ಶಾಂತಿಯುತವಾಗಿ ಭಕ್ತಿ ಪೂರ್ವಕವಾಗಿ ಸಾಂಪ್ರದಾಯಿಕ ಆಚರಣೆ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ವಿಶೇಷ ಗಮನ ಸೆಳೆಯುತ್ತಿದೆ.

ಜಯಂತಿಯ ಅಂಗವಾಗಿ ನಡೆಯುತ್ತಿರುವ ಜಾತ್ರೆಯಲ್ಲಿ ಸಮುದಾಯದವರು ವಿವಿಧ ಸ್ಥಳಗಳಿಂದ ಆಗಮಿಸಿ, ಸಾಂಪ್ರದಾಯಿಕ ವಸ್ತ್ರ ಆಭರಣಗಳನ್ನು ಮಾರಾಟ ಮಾಡಲಾಗುತ್ತಿದ್ದು, ಸಮುದಾಯದ ಸಂಸ್ಕೃತಿಯ ಅನಾವರಣ ಗೊಳಿಸಿದೆ.

## ಟ್ರಾಫಿಕ್ ಕಿರಿಕಿರಿ ತಪ್ಪಿಸಲು ಇರುವೆ ಮಾರ್ಗ !

ಸಿಡ್ನಿ, ಫೆ. 14 – ಟ್ರಾಫಿಕ್ ಕಿರಿಕಿರಿಯಿಂದ ಬೇಸರ ಪಟ್ಟುಕೊಳ್ಳದ ವ್ಯಕ್ತಿ ಯಾರಿದ್ದಾರೆ ? ಪ್ರತಿ ವರ್ಷ ಟ್ರಾಫಿಕ್‌ನಲ್ಲಿ ಸಮಯ ಹಾಳಾಗುವುದರಿಂದ ವಿಶ್ವದಾದ್ಯಂತ ಟ್ರಿಲಿಯನ್ ಡಾಲರ್‌ಗಟ್ಟಲೆ ನಷ್ಟವಾಗುತ್ತಿದೆ ಎಂದು ಅಂದಾಜಿಸಲಾಗುತ್ತಿದೆ.

ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ತರಹೇವಾರಿ ಪ್ರಯತ್ನಗಳು ನಡೆದಿವೆ. ಆದರೆ, ಫಲ ಮಾತ್ರ ಸಿಗುತ್ತಿಲ್ಲ.

ಇಂತಹ ಸಂದರ್ಭದಲ್ಲಿ ಭೂಮಿಯ ಮೇಲೆ 20 ಕ್ವಾಡ್ರಿಲಿಯನ್ ಸಂಖ್ಯೆಯಲ್ಲಿರುವ ಇರುವೆಗಳಿಂದ ಪಾಠ ಕಲಿಯಬಹುದೇ? ಎಂಬ ಆಲೋಚನೆಗಳು ಮೂಡಿ ಬರುತ್ತಿವೆ. ಅಂದ ಹಾಗೆ, ನಮಗೆ ಗೋಚರವಾಗುವ ವಿಶ್ವದಲ್ಲಿರುವ ಎಲ್ಲ ನಕ್ಷತ್ರಗಳಿಗಿಂತ ಹೆಚ್ಚಿನ ಸಂಖ್ಯೆಯ ಇರುವೆ ಗಳು ಭೂಮಿಯ ಮೇಲಿವೆ ಎನ್ನಲಾಗುತ್ತದೆ.

ಪ್ರತಿಯೊಂದು ಗೂಡಿನಲ್ಲಿ ಕೋಟ್ಯಂತರ ಇರುವೆಗಳಿರುತ್ತವೆ. ಅವುಗಳು ರಚಿಸುವ ಮಾರ್ಗ ಸಾವಿರ ಕಿ.ಮೀ.ಗಳವರೆಗೆ ಸಾಗುತ್ತದೆ. ಆದರೆ, ಈ ಮಾರ್ಗದಲ್ಲಿ ಇರುವೆಗಳು ಎಂದೂ 'ಜಾಮ್' ಆಗುವುದಿಲ್ಲ. ಮನುಷ್ಯರಂತೆ ಇರುವೆಗಳೂ ಸುಧಾರಿತ ಸಾರಿಗೆ ವ್ಯವಸ್ಥೆ ಹೊಂದಿವೆ. ಇದರಿಂದಾಗಿ ಇರುವೆ ಗಳು ದಕ್ಷ ರೀತಿಯಲ್ಲಿ ಬದುಕಲು ಸಾಧ್ಯವಾಗುತ್ತದೆ.

ಕೆಲ ಜಾತಿಯ ಇರುವೆಗಳು ಫೆರೊಮೊನ್ ಎಂಬ ರಾಸಾಯನಿಕಗಳನ್ನು ಬಳಸಿ ಮಾರ್ಗದ ಸಂಕೇತ ನೀಡುತ್ತವೆ. ತಾವು ನಡೆಯುವ ಮಾರ್ಗದ ಉದ್ದಕ್ಕೂ ಫೆರೊಮೊನ್ ಕಣಗಳನ್ನು ಬೀಳಿಸುತ್ತಾ ಉಳಿದವಕ್ಕೆ ದಾರಿ ತೋರಿಸುತ್ತವೆ.



ಇದರಿಂದಾಗಿ ಇರುವೆಗಳು ಹೊಸ ಆಹಾರ ಮೂಲಗಳನ್ನು ತ್ವರಿತವಾಗಿ ಪತ್ತೆ ಮಾಡಿ, ಅದನ್ನು ಗೂಡಿಗೆ ತೆಗೆದುಕೊಂಡು ಹೋಗಲು ಸಾಧ್ಯವಾಗುತ್ತದೆ.

1990ರ ಆರಂಭದಿಂದಲೇ ಇರುವೆಗಳ ಈ ವರ್ತನೆಯ ಅಧ್ಯಯನ ನಡೆಸಿ, ಆ ಮೂಲಕ ಸೂತ್ರಗಳನ್ನು ರೂಪಿಸಿ ಜಟಿಲವಾದ ಸಂಚಾರ ವ್ಯವಸ್ಥೆಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನಗಳು ನಡೆದಿದ್ದವು. ಹೆದ್ದಾರಿಗಳಲ್ಲಿ ವಾಹನಗಳು ಹೆಚ್ಚಾ ದರೆ, ಸಂಚಾರದ ವೇಗ ಕಡಿಮೆಯಾಗುತ್ತದೆ. ಜನ ಜಂಗುಳಿ ಹೆಚ್ಚಾದಾಗ ವೇಗವಾಗಿ ಹೋಗುವುದು ಅಸಾಧ್ಯ. ಆದರೆ, ಇರುವೆಗಳು ಮಾತ್ರ ಎಷ್ಟೇ ಸಂಖ್ಯೆಯಲ್ಲಿ ಸೇರಿಕೊಂಡರೂ ವೇಗ ಕಡಿಮೆ ಮಾಡುವುದಿಲ್ಲ. ಅದು ಹೇಗೆ? ಇರುವೆಗಳ ಸಂಖ್ಯೆ ಕಡಿಮೆ ಇದ್ದಾಗ ಒಂದು ಸಾಲಿನಲ್ಲಿ ಸಾಗುತ್ತವೆ. ದಟ್ಟಣೆ ಹೆಚ್ಚಾದರೆ ಎರಡು ಸಾಲು ಮಾಡಿಕೊಳ್ಳುತ್ತವೆ. ಇನ್ನೂ ಅಗತ್ಯವಾದರೆ ಮೂರ್ನಾಲ್ಕು ಸಾಲು ಹೆಚ್ಚಿಸಿಕೊಳ್ಳುತ್ತಾ ಹೋಗುತ್ತವೆ.

### ದಾರಿ ತಪ್ಪಿದಾಗ ಸಾವಿನ ಸುಳಿ

**ಅಂದ ಹಾಗೆ, ಇರುವೆಗಳ 'ಮಾರ್ಗ ದರ್ಶನ' ಪರಿಪೂರ್ಣ ಎಂದೇನೂ ಅಲ್ಲ. ಕೆಲವೊಮ್ಮೆ ದಾರಿ ತಪ್ಪಿದ ಇರುವೆಗಳು ಸುರುಳಿಯಾಕಾರದಲ್ಲಿ ಸುತ್ತುವ ಪ್ರಕ್ರಿಯೆ ಕಂಡು ಬಂದಿದೆ. ಇದಕ್ಕೆ 'ಆಂಟ್ ಮಿಲ್' 'ಆಂಟ್ ಡೆತ್ ಸ್ಪೈರಲ್' ಎಂದೆಲ್ಲ ಕರೆಯಲಾಗುತ್ತದೆ. ಇರುವೆಗಳು ಸಂಚಾರಕ್ಕೆ ಫೆರೊಮೊನ್ ಅವಲಂಬಿಸಿರುತ್ತವೆ. ನೈಸರ್ಗಿಕ ಕಾರಣದಿಂದಲೋ ಮತ್ತಾವುದೋ ಕಾರಣದಿಂದಲೋ ಇರುವೆಗಳ ಹಿಂಡು ದಾರಿ ತಪ್ಪಿದಾಗ ಚಕ್ರವಾಗಿ ಸುತ್ತಲು ಆರಂಭಿಸುತ್ತವೆ. ಒಮ್ಮೆ ಈ ಚಕ್ರ ಆರಂಭವಾಯಿತು ಎಂದರೆ ಇರು ವೆಗಳಿಗೆ ಹೊರ ಬರುವುದು ಹೇಗೆ ಎಂಬುದು ಗೊತ್ತಾಗುವುದೇ ಇಲ್ಲ. ಕೆಲವು ಗಂಟೆಗಳ ನಂತರ ಅವೆಲ್ಲವೂ ಸಾವಿಗೆ ಗುರಿಯಾಗುತ್ತವೆ.**

ಸಂಚಾರ ದಟ್ಟಣೆ ಹೆಚ್ಚಾದಾಗ ಕೆಲ ಇರುವೆಗಳು ಫೆರೊಮೊನ್ ಬಿಡುವುದನ್ನು ಕಡಿಮೆ ಮಾಡುತ್ತವೆ. ಹೀಗಾಗಿ ದಟ್ಟಣೆ ಹೆಚ್ಚಾಗಿರುವ ಮಾರ್ಗದ ಹೆಚ್ಚು ಇರುವೆಗಳನ್ನು ಆಕರ್ಷಿಸುವುದಿಲ್ಲ. ಇನ್ನು ಕೆಲ ಇರುವೆಗಳು ದಟ್ಟಣೆಗೆ ತಕ್ಕ ಹಾಗೆ ಚಲಿಸುವ ವೇಗ ಬದಲಿಸಿಕೊಳ್ಳುತ್ತವೆ. ಇನ್ನು ಕೆಲ ಇರುವೆಗಳು ಗುಂಪುಗಳಲ್ಲಿ ಸಾಗುವ ಮೂಲಕ ದಟ್ಟಣೆ ನಿರ್ವಹಿಸುತ್ತವೆ. ಗುಂಪಿನ ಕಾರಣದಿಂದ ಇರುವೆಗಳ ನಡುವೆ ಇರುವ (2ನೇ ಪುಟಕ್ಕೆ)

## ಬಿಬಿಸಿ ಕಚೇರಿಗಳಲ್ಲಿ ಐ.ಟಿ. ಶೋಧ

ನವದೆಹಲಿ, ಫೆ. 14 – ತೆರಿಗೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಹಾಗೂ ಮುಂಬೈಗಳಲ್ಲಿರುವ ಬಿ.ಬಿ.ಸಿ. ಕಚೇರಿಗಳಲ್ಲಿ ಆದಾಯ ತೆರಿಗೆ ಇಲಾಖೆಯು ಸಮೀಕ್ಷೆ ಕಾರ್ಯಾಚರಣೆ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೆಲ ವಾರಗಳ ಹಿಂದಷ್ಟೇ ಗುಜರಾತ್ ಗಲಭೆಗಳಿಗೆ ಸಂಬಂಧಿಸಿದಂತೆ ಬಿ.ಬಿ.ಸಿ. ವಿವಾದಾತ್ಮಕ ಸಾಕ್ಷ್ಯಚಿತ್ರ ಪ್ರಸಾರ ಮಾಡಿತ್ತು.

ಕಂಪನಿಯ ಕಾರ್ಯನಿರ್ವಹಣೆ ಹಾಗೂ ಭಾರತದ ವಿಭಾಗಕ್ಕೆ ಸಂಬಂಧಿಸಿದಂತೆ (5ನೇ ಪುಟಕ್ಕೆ)

## ಸಗಟು ಹಣದುಬ್ಬರ ಎರಡು ವರ್ಷಗಳಲ್ಲೇ ಅತಿ ಕಡಿಮೆ

ನವದೆಹಲಿ, ಫೆ. 14 – ಸಗಟು ಬೆಲೆ ಆಧರಿಸಿದ ಹಣದುಬ್ಬರ ಸೂಚ್ಯಂಕ ಕಳೆದ ಜನವರಿಯಲ್ಲಿ ಎರಡು ವರ್ಷಗಳಲ್ಲೇ ಅತಿ ಕಡಿಮೆ ಶೇ.4.73ರ ಹಂತಕ್ಕೆ ಕುಸಿದಿದೆ. ಸತತ ಎಂಟು ತಿಂಗಳಿನಿಂದ ಸಗಟು ಬೆಲೆ ಸೂಚ್ಯಂಕದ ಹಣದುಬ್ಬರ ಇಳಿಮುಖದಲ್ಲಿದೆ. ಡಿಸೆಂಬರ್ 2022ರಲ್ಲಿ ಹಣದುಬ್ಬರ ಶೇ.4.95 ಹಾಗೂ ಕಳೆದ ವರ್ಷ ಜನವರಿಯಲ್ಲಿ ಶೇ.13.68 ಆಗಿತ್ತು.

## ಕುಡಿಯುವ ನೀರಿಗೆ ನಿರ್ಲಕ್ಷ್ಯ ಅಧಿಕಾರಿಗಳ ಬ್ರಿಟಿಷ್ ಮನಸ್ಥಿತಿ

### ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತರಾಟೆ

ಬೆಂಗಳೂರು, ಫೆ. 14 - ರಾಜ್ಯದಲ್ಲಿ ಕುಡಿಯುವ ನೀರು ಯೋಜನೆಯ ವಿಚಾರದಲ್ಲಿ ನಿರ್ಲಕ್ಷ್ಯ ಮನೋಭಾವ ತಳೆದಿರುವ ಅಧಿಕಾರಿಗಳು ಇನ್ನೂ ಬ್ರಿಟಿಷ್ ಆಡಳಿತ ವ್ಯವಸ್ಥೆಯ ಮನಸ್ಥಿತಿಯಲ್ಲಿದ್ದಾರೆ ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ವಿಧಾನಸಭೆಯಲ್ಲಿಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಗಾಮನಹಳ್ಳಿ ಹಾಗೂ ಇತರೆ 16 ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಮಂಜೂರಾಗಿದ್ದರೂ ಯೋಜನೆ ಆಮೆಗತಿಯಲ್ಲಿ ಸಾಗುತ್ತಿದೆ (2ನೇ ಪುಟಕ್ಕೆ)

## ಕುಟುಕು ಕಾರ್ಯಾಚರಣೆ : ಬಿಸಿಸಿಐ ಆಂತರಿಕ ವಿಷಯ ಬಯಲು

ನವದೆಹಲಿ, ಫೆ. 14 – ಭಾರತೀಯ ಕ್ರಿಕೆಟ್ ತಂಡದ ಮುಖ್ಯ ಆಯ್ಕೆಗಾರ ಚೇತನ್ ಶರ್ಮ ಅವರು ಕುಟುಕು ಕಾರ್ಯಾಚರಣೆಗೆ ಸಿಲುಕಿದ್ದು, ಬಿ.ಸಿ.ಸಿ.ಐ. ಆಂತರಿಕ ವಿಷಯಗಳನ್ನು ಹೊರಗೆಡವಿದ್ದಾರೆ.

ವಿರಾಟ್ ಕೊಹ್ಲಿ ಹಾಗೂ ಜಸ್‌ಪ್ರಿತ್ ಬುಮ್ರಾ ರೀತಿಯ ಆಟಗಾರರ ಬಗ್ಗೆ ಶರ್ಮ ಮಾತನಾಡಿದ್ದಾರೆ. ಅಲ್ಲದೇ, ಮುಖ್ಯ ತರಬೇತುದಾರ ರಾಹುಲ್ ದ್ರಾವಿಡ್ ಹಾಗೂ ವಿರಾಟ್ ಕೊಹ್ಲಿ ನಡುವೆ ನಡೆದ ಆಂತರಿಕ ಚರ್ಚೆಯನ್ನೂ ಬಯಲು ಮಾಡಿದ್ದಾರೆ. (2ನೇ ಪುಟಕ್ಕೆ)








# ಭದ್ರಾ ನೀರು ಹರಿಸಲು ಸಾಧ್ಯವಿಲ್ಲ : ದ್ಯಾವಪ್ಪರೆಡ್ಡಿ




ಮಲೇಬೆನ್ನೂರು, ಫೆ.14- ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ಕೊನೆ ಭಾಗದ ರೈತರು ನಾಲೆ ನೀರಿಗಾಗಿ ಆಗ್ರಹಿಸಿ ಪಟ್ಟಣದ ಕರ್ನಾಟಕ ನೀರಾವರಿ ನಿಗಮದ 3ನೇ ವಿಭಾಗೀಯ ಕಚೇರಿ ಎದುರು ಇತ್ತೀಚಿಗೆ ಪ್ರತಿಭಟನೆ ನಡೆಸಿದರು.

ನೀರಿಲ್ಲದೆ ಸಸಿ ಮಡಿ ಒಣಗುತ್ತಿವೆ. ಈಗ ಭತ್ತದ ನಾಟಿ ಮಾಡದಿದ್ದರೆ ಪ್ರಯೋಜನವಿಲ್ಲ. ಇದರಿಂದ ಸಾವಿರಾರು ರೂ. ನಷ್ಟವಾಗುತ್ತದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ವಿಷಯ ತಿಳಿದ ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್ ಘಟನಾ ಸ್ಥಳಕ್ಕೆ ಆಗಮಿಸಿ ಧರಣಿ ನಿರತ ರೈತರೊಂದಿಗೆ ಮಾತುಕತೆ ನಡೆಸಿದರು.

ಎಂಜಿನಿಯರ್‌ಗಳನ್ನು ಚುನಾವಣಾ ಕೆಲಸಕ್ಕೆ ನಿಯೋಜಿಸಲಾಗಿದೆ ಎಂದು ತಿಳಿದುಬಂದಾಗ ಡಿಸಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ನಾಲೆ ನೀರಿನ ಸಮಸ್ಯೆ ಪರಿಹರಿಸಲು ನೀರಾವರಿ ನಿಗಮದ ಸಿಬ್ಬಂದಿಯನ್ನು ಚುನಾವಣಾ ಕೆಲಸದಿಂದ ಬಿಡುವಂತೆ ಕೋರಿದ ವೇಳೆ ಜಿಲ್ಲಾಧಿಕಾರಿ ಸಮ್ಮತಿ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ವಾಸನ, ಭಾನುವಳ್ಳಿ, ಕಮಲಾಪುರ, ಭಾನುವಳ್ಳಿ ಭಾಗದಲ್ಲಿ ನಾಲೆ ನೀರಿನ ಸಮಸ್ಯೆ ಇದ್ದು, ಸಮರ್ಪಕವಾಗಿ ನೀರು ನಾಲೆಯಲ್ಲಿ ಬರುತ್ತಿಲ್ಲ ಎಂದು ದೂರಿ ಪೊಲೀಸ್ ಭದ್ರತೆಯಲ್ಲಿ ನೀರು ಹರಿಸಲು ರೈತರು ಒತ್ತಾಯಿಸಿದರು.

ರೈತರಾದ ಸಿರಿಗೆರೆ ತಿಪ್ಪೇರುದ್ರಪ್ಪ, ಜಿಗಳಿಯ ಬಿಳಸನೂರು ಚಂದ್ರಪ್ಪ, ಪ್ರಶಾಂತ್, ಅಶೋಕ್, ತಿಪ್ಪಣ್ಣ, ಕುಬೇರಗೌಡ, ರವಿಕುಮಾರ್, ಭಾನುವಳ್ಳಿ ಗುತ್ಯಪ್ಪ, ದೊಡ್ಡಬಸಪ್ಪ, ಷಣ್ಮುಖಪ್ಪ ಸೇರಿದಂತೆ ಹೆಚ್ಚಿನ ಸಂಖ್ಯೆಯ ರೈತರು ಇದ್ದರು.

**ನೀರು ಬಿಡಲು ಸಾಧ್ಯವಿಲ್ಲ :** ತುಂಗಭದ್ರಾ ಜಲಾಶಯಕ್ಕೆ ಬೇಸಿಗೆ ಬೆಳೆಗಾಗಿ 7 ಟಿಎಂಸಿ ನೀರನ್ನು ಭದ್ರಾ ಜಲಾಶಯದಿಂದ ಹರಿಸಲು ತುಂಗಭದ್ರಾ ಜಲಾಶಯ ಮಂಡಳಿ ಸರ್ಕಾರಕ್ಕೆ ಮಾಡಿರುವ ಮನವಿ ಪತ್ರ ತೋರಿಸಿದ ಭದ್ರಾ ನೀರು ಬಳಕೆದಾರರ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.

ಭದ್ರಾ ಜಲಾಶಯದಿಂದ ಭದ್ರಾ ಮೇಲ್ದಂಡೆ ಯೋಜನೆಗೆ ಈಗಾಗಲೇ ನೀರು ಹರಿಸಲಾಗಿದೆ. ಜೊತೆಗೆ ಮೈಲಾರ ಜಾತ್ರೆಗಾಗಿ ಕುಡಿಯುವ ನೀರಿಗಾಗಿ ನದಿಗೆ ನೀರು ಹರಿಸಲಾಗಿದೆ. ಒಂದು ವೇಳೆ ಅಧಿಕಾರಿಗಳು ರಾಜಕಾರಣಿಗಳ ಒತ್ತಡಕ್ಕೆ ಮಣಿದು ರಾತ್ರೋರಾತ್ರಿ ಕದ್ದುಮುಚ್ಚಿ ಭದ್ರಾ ನದಿಗೆ ನೀರು ಹರಿಸಿದರೆ ಪರಿಣಾಮ ನೆಟ್ಟಗಿರುವುದಿಲ್ಲ. ತುರ್ತಾಗಿ ಕಾಡಾ ಸಭೆ ಕರೆಯುವಂತೆ ದ್ಯಾವಪ್ಪರೆಡ್ಡಿ ಆಗ್ರಹಿಸಿದರು.

# ಮಾಸಾಂತ್ಯಕ್ಕೆ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ

ಬೆಂಗಳೂರು, ಫೆ. 14 - ಮಾಜಿ ಸಚಿವರಾದ ವಿ.ಮುನಿಯಪ್ಪ, ವೆಂಕಟರ ಮಣಪ್ಪ ಸೇರಿದಂತೆ ಹಾಲಿ ಐವರು ವಿಧಾನಸಭೆಯ ಸದಸ್ಯರಿಗೆ ಟಿಕೆಟ್ ನಿರಾಕರಿಸಿ 126 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಲು ಕಾಂಗ್ರೆಸ್ ಅಣಿಯಾಗಿದೆ ಎಂದು ಮೂಲಗಳು ತಿಳಿಸಿವೆ.

ಅಭ್ಯರ್ಥಿಗಳ ಆಯ್ಕೆಗೆ ಚುನಾವಣಾ ಪೂರ್ವ ಸಮೀಕ್ಷಾ ವರದಿ ಸೇರಿದಂತೆ ಕಸರತ್ತಿನ ಮೇಲೆ ಕಸರತ್ತು ನಡೆಸಿ ಅಂತಿಮವಾಗಿ ಮೊದಲ ಪಟ್ಟಿ ಇದೇ 28ರಂದು ಪ್ರಕಟವಾಗಲಿದೆ ಎನ್ನಲಾಗಿದೆ.

ಬಿಜೆಪಿ ಮತ್ತು ಜೆಡಿಎಸ್‌ಗೆ ಸಡ್ಡು ಹೊಡೆದು, ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಅಧಿಕಾರಕ್ಕೆ ಬರಲೇ ಬೇಕು ಎಂದು ಪಣ ಕಾಂಗ್ರೆಸ್ ಪಣ ತೊಟ್ಟಿದೆ. ವಿಧಾನಸಭೆಯ 224 ಕ್ಷೇತ್ರಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕಳೆದ ಮೂರು ದಿನಗಳಿಂದ ವರಿಷ್ಠರು ನೇಮಿಸಿರುವ ಪರಿಶೀಲನಾ ಸಮಿತಿ ಕಸರತ್ತು ನಡೆಸಿ ಒಂದು ತೀರ್ಮಾನಕ್ಕೆ ಬಂದಿದೆ. ಆಕಾಂಕ್ಷಿಗಳು ಮತ್ತು ರಾಜ್ಯದ ನಾಯಕರೊಂದಿಗೆ ಚರ್ಚೆ ನಡೆಸಿದ ನಂತರ ವಿವಾದವಲ್ಲದ ಮತ್ತು ಹಾಲಿ ಶಾಸಕರು ಮತ್ತು ಪ್ರಭಾವಿಗಳಿರುವ 126 ಕ್ಷೇತ್ರಗಳಿಗೆ ತಲಾ ಒಂದು ಇಲ್ಲವೇ ಎರಡು ಹೆಸರುಗಳನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡಲಿದೆ.

ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಕೇಂದ್ರ ಚುನಾವಣಾ ಸಮಿತಿ ಸಭೆ ಸೇರಿ ಪರಿಶೀಲನಾ ಸಮಿತಿ ಸಲ್ಲಿಸುವ ಪಟ್ಟಿಯನ್ನು ಪರಿಶೀಲಿಸಿ ಅಂತಿಮ ನಿರ್ಧಾರ ಕೈಗೊಳ್ಳಲಿದೆ.

ಕೇಂದ್ರ ಘಟಕ ನಡೆಸಿರುವ ರಾಜ್ಯ ಚುನಾವಣಾ ಪೂರ್ವ ಸಮೀಕ್ಷೆ ವರದಿಗಳನ್ನು ಮುಂದಿಟ್ಟುಕೊಂಡು ಸಮಿತಿಯ ಶಿಫಾರಸ್ಸನ್ನು ತುಲನೆ ಮಾಡಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಟಿಕೆಟ್ ನಿರಾಕರಿಸಲ್ಪಡುವ ಸದಸ್ಯರ ಕುಟುಂಬದವರಿಗೆ ಟಿಕೆಟ್ ನೀಡಲು ರಾಜ್ಯ ಘಟಕ ಕೇಂದ್ರಕ್ಕೆ ಶಿಫಾರಸ್ಸು ಮಾಡಿದೆ ಎನ್ನಲಾಗಿದೆ.

**ಶತಮಾನದ ಇತಿಹಾಸವುಳ್ಳ ಕಾಂಗ್ರೆಸ್‌ಗೆ ಕೆಲವು ಕ್ಷೇತ್ರಗಳಲ್ಲಿ ಆಕಾಂಕ್ಷಿಗಳ ದಂಡೇ ಇದ್ದರೆ, ಹೊಳೆ ನರಸೀಪುರ ಸೇರಿದಂತೆ 22 ಕ್ಷೇತ್ರಗಳಲ್ಲಿ ಪಕ್ಷದ ಸಮರ್ಥ ಅಭ್ಯರ್ಥಿಗಳೇ ಇಲ್ಲ. ಕೆ.ಆರ್.ಪೇಟೆ ಸೇರಿದಂತೆ ಕೆಲವು ಕ್ಷೇತ್ರಗಳಿಗೆ ಜೆಡಿಎಸ್ ಮತ್ತು ಬಿಜೆಪಿ ಪ್ರಭಾವಿಗಳನ್ನು ಸೆಳೆದುಕೊಂಡು ಕಣಕ್ಕಿಳಿಸಲು ಪಕ್ಷ ಮುಂದಾಗಿದೆ.**

## ಕುಟುಕು ಕಾರ್ಯಾಚರಣೆ: ಬಿಸಿಸಿಐ ಆಂತರಿಕ ವಿಷಯ ಬಯಲು

(1ನೇ ಪುಟದಿಂದ) ಕ್ರಿಕೆಟಿಗರು ಪೂರ್ಣ ಸಾಮರ್ಥ್ಯ ಪಡೆಯಲು ಚುಚ್ಚುಮದ್ದುಗಳನ್ನು ಪಡೆಯುವ ಘಟನೆಗಳು ನಡೆದಿವೆ ಎಂದೂ ಅವರು ತಿಳಿಸಿದ್ದಾರೆ.

ಮಾಜಿ ನಾಯಕ ವಿರಾಟ್ ಕೊಹ್ಲಿ ಹಾಗೂ ಬಿಸಿಸಿಐ ಮಾಜಿ ಅಧ್ಯಕ್ಷ ಸೌರವ್ ಗಂಗೂಲಿ ನಡುವೆ ಅಹಂ ಸಂಘರ್ಷ ಇತ್ತು ಎಂದೂ ಅವರು ತಿಳಿಸಿದ್ದಾರೆ.

ಬಿ.ಸಿ.ಸಿ.ಐ. ಈ ಬಗ್ಗೆ ಪರಿಶೀಲಿಸುತ್ತಿದೆ. ಚೇತನ್ ಶರ್ಮ ಅವರನ್ನು ಆಯ್ಕೆ ಸಮಿತಿಯಿಂದ ಕೈ ಬಿಡುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

# ರಾಗ, ದ್ವೇಷ, ತೊರೆದು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಿ

**ಹರಪನಹಳ್ಳಿಯಲ್ಲಿ ಕೊಟ್ಟೂರು ಪಾದಯಾತ್ರಿಗಳಿಗೆ ಅನ್ನ ಸಂತರ್ಪಣೆಯಲ್ಲಿ ಟಿ.ಎಂ.ಚಂದ್ರಶೇಖರಯ್ಯ**



ಹರಪನಹಳ್ಳಿ, ಫೆ.14 - ಧರ್ಮದ ತಳಹದಿಯಲ್ಲಿ ಜೀವನ ಸಾಗಿಸಬೇಕು, ರಾಗ, ದ್ವೇಷ, ತೊರೆದು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ತೆಗ್ಗಿನಮಠ ಸಂಸ್ಥೆಯ ಕಾರ್ಯದರ್ಶಿ ಟಿ.ಎಂ. ಚಂದ್ರಶೇಖರಯ್ಯ ಕರೆ ನೀಡಿದರು.

ಕೊಟ್ಟೂರು ಗುರು ಬಸವೇಶ್ವರ ರಥೋತ್ಸವಕ್ಕೆ ಪಾದ ಯಾತ್ರೆ ಹೊರಟಿರುವ ಭಕ್ತಾದಿಗಳಿಗೆ ಪಟ್ಟಣದ ಕೊಟ್ಟೂರು ರಸ್ತೆಯಲ್ಲಿ ಸ್ಥಳೀಯ ಬಿ.ಎಸ್.ಎನ್.ಎಲ್. ನಿವೃತ್ತ ನೌಕರ ಕೆ.ಆರ್. ಸುಧಾಕರ ಅವರು ಏರ್ಪಡಿಸಿದ್ದ ಅನ್ನ ಸಂತರ್ಪಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಪಂಚ ಗಣಾಧೀಶರಲ್ಲಿ ಒಬ್ಬರಾದ ಕೊಟ್ಟೂರೇಶ್ವರ ರಥೋತ್ಸವಕ್ಕೆ ನಾಡಿನ ಜನ ಪಾದ ಯಾತ್ರೆ ಮೂಲಕ ಹೋಗುತ್ತಿದ್ದಾರೆ, ಇವತ್ತು ದೇವರ ಮೇಲೆ ನಮ್ಮ ಜನರು ನಂಬಿಕೆ, ಭಕ್ತಿ ಇಟ್ಟು ಕೊಂಡಿದ್ದಾರೆ, ಇಂದಿನ ಒತ್ತಡದ ಜೀವನದಲ್ಲಿ ಭಕ್ತಿಯ ಮಾರ್ಗದಲ್ಲಿ ನಡೆದರೆ ಶಾಂತಿ, ನೆಮ್ಮದಿ, ದೊರಕುತ್ತದೆ. ರಾಗ, ದ್ವೇಷ, ತೊರೆದು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡರೆ ಕೊಟ್ಟೂರು ಗುರು ಬಸವೇಶ್ವರರ ಆಶೀರ್ವಾದ ಸದಾ ಇರುತ್ತದೆ ಎಂದು ಹೇಳಿದರು.

ಪ್ರತಿ ವರ್ಷ ಕೊಟ್ಟೂರು ರಥೋತ್ಸವಕ್ಕೆ ತೆರಳುವ ಭಕ್ತಾದಿಗಳ ಸಂಖ್ಯೆ ಹೆಚ್ಚುತ್ತಿದ್ದು, ಇದು ಜನರು ಧರ್ಮದ ಮೇಲೆ ಇಟ್ಟಿರುವ ನಂಬಿಕೆ ಹೆಚ್ಚುತ್ತಿದೆ ಎಂಬುದನ್ನು ತೋರಿಸುತ್ತದೆ. ಭಕ್ತರು ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಅನ್ನ ಸಂತರ್ಪಣೆಯ ದಾನಿಗಳಾದ ಕೆ.ಆರ್. ಸುಧಾಕರ ಮಾತನಾಡಿ, ಕಳೆದ 17 ವರ್ಷಗಳ ಹಿಂದೆ ಹಾವೇರಿ ಜಿಲ್ಲೆಯ ಹೊಸರಿತ್ತಿ, ಅತ್ತಿಗೇರಿ, ಮೆಡ್ಲೇರಿ, ಮೇಲ್ಮುರಿ, ಹಿರೇಮುಗದೂರು, ಹಂದಿಗನೂರು, ಶಿಶುವಿನಹಾಳು, ಮುಂತಾದ ದೂರದ ಗ್ರಾಮಗಳಿಂದ ಕೇವಲ 15 ಜನ ಬರುತ್ತಿದ್ದರು, ಪಾದಯಾತ್ರೆಗೆ ಬರುವಾಗ ವಾಸ್ತವ್ಯ ಪ್ರಸಾದದ ವ್ಯವಸ್ಥೆ ನಿಚ್ಚಾಪುರದಲ್ಲಿ ಮಾಡಲಾಗಿತ್ತು, ಅದರೂ ಕೂಡ ಅಲ್ಲಿ ಸ್ವಲ್ಪ ವ್ಯತ್ಯಾಸವಾದ ಪರಿಣಾಮ ನಮ್ಮ ಕುಟುಂಬದವರು ಹರಪನಹಳ್ಳಿಯಲ್ಲಿ ಅನ್ನ ಸಂತರ್ಪಣೆ ಮಾಡುತ್ತಿದ್ದೇವೆ ಎಂದರು.

ಅನ್ನ ಸಂತರ್ಪಣೆಯ ದಾನಿಗಳಾದ ಕೆ. ಆರ್. ಸುಧಾಕರ, ಪತ್ನಿ ಕೆ.ಎಸ್. ಮಂಜುಳಾ, ಪುತ್ರರಾದ ಪ್ರದೀಪ್‌ರಾಜ, ಸಂದೀಪ, ಮತ್ತಿತರರು ಉಪಸ್ಥಿತರಿದ್ದರು. ದೂರದ ಗ್ರಾಮಗಳಿಂದ ಭಕ್ತರು ಕೊಟ್ಟೂರಿಗೆ ಪಾದ ಯಾತ್ರೆ ಹೊರಟಿದ್ದು, ಹರಪನಹಳ್ಳಿ ತೆಗ್ಗಿನಮಠದಲ್ಲಿ ಆರ್ಯ ವೈಶ್ಯ ಸಮಾಜದವರು ಸೇರಿದಂತೆ ಹಲವಾರು ಸಂಘ ಸಂಸ್ಥೆಗಳು ದಾರಿ ಉದ್ದಕ್ಕೂ ಅನ್ನ ಸಂತರ್ಪಣೆ ನೆರವೇರಿಸಿದ್ದರು.

ಆರ್ಯ ವೈಶ್ಯ ಮಹಾ ಮಂಡಲದ ಡಾ.ಪಿ. ಅನಂತಶೆಟ್ಟಿ, ಸತೀಶ್ ಬಂಕಾಪುರ, ಮೋಹನ, ಕಡ್ಲಿ ರಾಘವೇಂದ್ರಶೆಟ್ಟಿ, ಮುದಗಲ್ ಶ್ರೀಧರ ಶೆಟ್ರು, ಗಂಗಾವತಿ ಕೃಷ್ಣಮೂರ್ತಿ, ಎಂ. ಗುರು ಮೂರ್ತಿ, ರಾಜೇಂದ್ರ, ಬದರಿನಾರಾಯಣ, ಆರ್ಯ ವೈಶ್ಯ ಮಹಿಳಾ ಮಂಡಳಿ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಮಾಜಿ ಲಯನ್ಸ್ ರಾಜ್ಯಪಾಲರಿಗೆ ಗೌರವ ಸಮರ್ಪಣೆ

ಲಯನ್ಸ್ ಕ್ಲಬ್ ವತಿಯಿಂದ ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲರಿಗೆ ಗೌರವ ಸಮರ್ಪಿಸುವ ಕಾರ್ಯಕ್ರಮವು ಇಂದು ಸಂಜೆ 7.30ಕ್ಕೆ ಲಯನ್ಸ್ ಭವನದಲ್ಲಿ ನಡೆಯಲಿದೆ.

ಲಯನ್ಸ್ ಮಾಜಿ ರಾಜ್ಯ ಪಾಲರುಗಳಾದ ಡಾ. ಜಿ. ಶಿವಲಿಂಗಪ್ಪ, ಡಾ.ಬಿ.ಎಸ್.ನಾಗಪ್ರಕಾಶ್, ಡಾ.ಟಿ.ಬಸವರಾಜ್, ಹೆಚ್.ಎನ್. ಶಿವಕುಮಾರ್, ಎ.ಆರ್. ಉಜ್ಜನಪ್ಪ ಅವರುಗಳನ್ನು ಸನ್ಮಾನಿಸಲಾಗುತ್ತದೆ ಎಂದು ಕ್ಲಬ್ಬಿನ ಕಾರ್ಯದರ್ಶಿ ಕಣವಿ ನಟರಾಜ್ ತಿಳಿಸಿದ್ದಾರೆ.

ಲಯನ್ಸ್ ಕ್ಲಬ್ ಅಧ್ಯಕ್ಷ ಎನ್.ಆರ್. ನಾಗಭೂಷಣರಾವ್ ಸಮಾರಂಭದ ಅಧ್ಯಕ್ಷತೆ ವಹಿಸುವರು ಎಂದು ಸಹಕಾರ್ಯದರ್ಶಿ ಭೀಮಾನಂದ ಶೆಟ್ಟಿ, ಖಜಾಂಚಿ ಎಸ್.ಕೆ. ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದು ಜಯಂತಿ

ಸೇವಾಲಾಲ್ ಜಯಂತಿಯನ್ನು ಇಲ್ಲಿನ ಪುರಸಭೆ ಮತ್ತು ನಾಡ ಕಛೇರಿಯಲ್ಲಿ ಬೆಳಿಗ್ಗೆ 10-30 ಕ್ಕೆ ಹಮ್ಮಿಕೊಳ್ಳಲಾಗಿದೆ.

## ತಿರುಪತಿಯಲ್ಲಿ ಕಾಗಿನೆಲೆ ಗುರುಪೀಠಕ್ಕೆ ಜಮೀನು ನೀಡುವಂತೆ ಸಿಎಂಗೆ ಮನವಿ



ಮಲೇಬೆನ್ನೂರು ಫೆ,14 - ಆಂಧ್ರ ಪ್ರದೇಶದ ತಿರುಪತಿ-ತಿರುಮಲದಲ್ಲಿ ಶ್ರೀ ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರು ಪೀಠವನ್ನು ಸ್ಥಾಪಿಸಲು ಜಮೀನು ನೀಡುವಂತೆ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರನ್ನು ವಿಜಯವಾಡದಲ್ಲಿ ಮಂಗಳವಾರ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ನೇತೃತ್ವದ ನಿಯೋಗ ಭೇಟಿ ಮಾಡಿ ಮನವಿ ಸಲ್ಲಿಸಿದರು. ಆಂಧ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಉಷಾ ಚರಣ್ , ಕರ್ನಾಟಕ ಸರ್ಕಾರದ ಸಚಿವರಾದ ಎಂಟಿಬಿ ನಾಗರಾಜ್, ಮಾಜಿ ಸಚಿವರಾದ ಎಚ್.ಎಂ ರೇವಣ್ಣ , ಡಾ ಬಿ.ಕೆ ರವಿ, ಮಂಜಣ್ಣ ಮಾಗೋದಿ ಮತ್ತಿತರರು ಈ ನಿಯೋಗದಲ್ಲಿ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಜಗನ್ ಮೋಹನ್ ರೆಡ್ಡಿ ಅವರನ್ನು ಶ್ರೀಗಳು ಕಂಬಳಿ ಹೊದಿಸಿ, ಗೌರವಿಸಿದರು.

## ಮಾಲಾಧಾರಿಗಳಿಗೆ ಹಣ್ಣು, ಬಿಸ್ಕತ್ ವಿತರಣೆ



ದಾವಣಗೆರೆ, ಫೆ.14- ಬಂಜಾರ ಸಮುದಾಯದ ಏಕೈಕ ಸಂತ ಶ್ರೀ ಸೇವಾಲಾಲ್‌ರವರ 284ನೇ ಜಯಂತ್ಯೋತ್ಸವ ಸಮಾರಂಭಕ್ಕೆ ನೂರಾರು ಕಿ ಲೋ ಮೀ ಟ ರ್ ನಿ ಂ ದ ಕಾಲ್ನಡಿಗೆ ಯಲ್ಲಿ ನಡೆದುಬಂದ ಮಾಲಾಧಾರಿ ಗಳಿಗೆ ನೀರಿನ ಬಾಟಲ್, ಬಿಸ್ಕತ್, ಬಾಳೆಹಣ್ಣು ಹಾಗೂ ಇತರೆ ಹಣ್ಣುಗ ಳನ್ನು ಶ್ರೀ ಸಂತ ಸೇವಾಲಾಲ್ ಜನ್ಮ ಸ್ಥಾನ ಮಹಾಮಠ ನಿರ್ದೇಶಕ ಎನ್. ಹನುಮಂತನಾಯ್ಕ ವಿತರಣೆ ಮಾಡಿದರು.

# ಬಾಗಳಿ ಗ್ರಾ.ಪಂ ಅಧ್ಯಕ್ಷರಾಗಿ ಕೆ. ನೀಲಮ್ಮ



**ಹರಪನಹಳ್ಳಿ**

ಹರಪನಹಳ್ಳಿ, ಫೆ.14 - ತಾಲ್ಲೂಕಿನ ಬಾಗಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಕೆ. ನೀಲಮ್ಮ ಭರಮನಗೌಡ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದೆ ಅಧ್ಯಕ್ಷರಾಗಿದ್ದ ಬಿ.ಬಿ. ನಾಗರಾಜ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಮಂಗಳವಾರ ಚುನಾವಣೆ ನಡೆದಿದ್ದು, ಒಟ್ಟು 16 ಜನ ಸದಸ್ಯರ ಪೈಕಿ 13 ಜನ ಸದಸ್ಯರು ಚುನಾವಣೆ ಪ್ರಕ್ರಿಯೆಯಲ್ಲಿ ಹಾಜರಿದ್ದರು. ಕೆ. ನೀಲಮ್ಮ ಅವರು ಒಬ್ಬರೇ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿ ದ್ದಾರೆ ಎಂದು ಚುನಾವಣಾಧಿಕಾರಿ ತಹಶೀಲ್ದಾರ್ ಡಾ. ಶಿವಕುಮಾರ್ ಬಿರಾದಾರ ಘೋಷಿಸಿದರು.

ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಕೆ. ನೀಲಮ್ಮ ಅವರನ್ನು ಮುಖಂಡರಾದ ಕೀಲು, ಮೂಳೆ, ನಾಟಿ ವೈದ್ಯ, ಪಂಡಿತ್ ಬಿ.ಬಿ. ಹೊಸೂರಪ್ಪ, ಚಿಕ್ಕಳ್ಳಿ ನಾಗಣ್ಣ, ಚಿನ್ನಪ್ಪ, ವೀರೇಶ್, ಸಿ.ಪಿ. ಚಿದಾನಂದ, ಬಸವಲಿಂಗನಗೌಡ, ಬಸವನಗೌಡ, ಸಿ.ಪಿ. ಮಂಜುನಾಥ್, ಕೊಟ್ರೇಶ್, ಗಾಂಧಿ, ವೆಂಕಟೇಶ್, ಶಶಿ, ನಿಂಗಪ್ಪ, ಭರ್ಮಜ್ಜ, ಶರೀಫ್ ಶಾಲು ಹೊದಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ. ನಾಗರಾಜ, ಉಪಾಧ್ಯಕ್ಷೆ ಗೀತಮ್ಮ, ಸದಸ್ಯರಾದ ಕೆ. ನಾಗರಾಜ, ಪೂಜಾರ ಹನುಮಂತಪ್ಪ, ರೇಣುಕಮ್ಮ, ಕರಿಯಮ್ಮ, ಕೊಟ್ರಮ್ಮ, ಹಸೀನಾಬಿ, ಮರಿಯಮ್ಮ, ಎನ್. ಮಂಜುನಾಥ್, ಶಿವರಾಮಪ್ಪ, ಬಸವರಾಜ, ಬಣಕಾರ ಮಂಜುನಾಥ್, ಬಡಿಗೇರ ಈರಣ್ಣ, ಚಿಕ್ಕಹಳ್ಳಿ ಮಂಜಣ್ಣ, ಕೋಡಿಹಳ್ಳಿ ರೇವಣ್ಣ, ಆಶಾ ಇತರರು ಇದ್ದರು.

# ಅಧಿಕಾರಿಗಳ ಬ್ರಿಟಿಷ್ ಮನಸ್ಥಿತಿ

**(1ನೇ ಪುಟದಿಂದ)** ಎಂದು ಅಸಮಾಧಾನ ವ್ಯಕ್ತಪಡಿಸಿದರು. ಮಧ್ಯೆ ಪ್ರವೇಶಿಸಿದ ಸಭಾಧ್ಯಕ್ಷರು, ನಮ್ಮ ಅಧಿಕಾರಿಗಳು ಈಗಲೂ ಬ್ರಿಟಿಷ್ ಆಳ್ವಿಕೆಯ ಮನಸ್ಥಿತಿಯಿಂದ ಹೊರಬಂದಿಲ್ಲ. ನಾನು ಎಲ್ಲರನ್ನೂ ಕೆಟ್ಟವರು ಎಂದು ದೂಷಿಸುವುದಿಲ್ಲ. ಕೆಲವು ಅಧಿಕಾರಿಗಳು ಒಳ್ಳೆಯವರು ಇದ್ದಾರೆ. ಯಾವುದೇ ಯೋಜನೆಗೂ ಕಾನೂನು ಕಾರಣ ನೀಡಿ ವಿಳಂಬ ಮಾಡುವುದು ಅವರಿಗೆ ಕಾಯಕವಾಗಿದೆ. ಕಿವಿ ಹಿಂಡದಿದ್ದರೆ, ಯಾವುದೇ ಕೆಲಸ ವಾಗುವುದಿಲ್ಲ. ಮೊದಲು ಮನಸ್ಥಿತಿ ಬದಲಾಯಿಸಿಕೊಳ್ಳಬೇಕು ಎಂದು ಬೇಸರ ವ್ಯಕ್ತಪಡಿಸಿದರು. ಕಾನೂನು ಹೀಗೆ ಹೇಳುತ್ತದೆ. ನ್ಯಾಯಾಲಯದ ಆದೇಶವಿದೆ. ನಾಳೆ ನಮ್ಮ ಸೇವಾ ಅವಧಿಗೆ ಏನಾದರೂ ತೊಂದರೆ ಆಗಬಹುದು ಎಂಬ ನಾನಾ ಕಾರಣ ನೀಡಿ ವಿಳಂಬ ಮಾಡುತ್ತಾರೆ. ಇದು ಕುಡಿಯುವ ನೀರಿನ ಯೋಜನೆ. ಟ್ಯಾಂಕ್ ನಿರ್ಮಿಸಿ ಪೈಪ್‌ಲೈನ್ ಮಾಡಿಕೊಡಲು ಇರುವ ಸಮಸ್ಯೆಯಾದರೂ ಏನು? ನೀವು ಅಧಿಕಾರಿಗಳ ಕಿವಿ ಹಿಂಡದಿದ್ದರೆ, ಎಲ್ಲಾ ಯೋಜನೆಗಳು ಇದೇ ರೀತಿ ಆಗುತ್ತದೆ ಎಂದು ಸಚಿವರನ್ನುದ್ದೇಶಿಸಿ ಹೇಳಿದರು. ಕಾಂಗ್ರೆಸ್ ಶಾಸಕ ಆರ್.ವಿ. ದೇಶಪಾಂಡೆ ಮಾತನಾಡಿ, ಕುಡಿಯುವ ನೀರಿನ ಯೋಜನೆಗೆ ಅರಣ್ಯ, ಕಂದಾಯ ಸೇರಿದಂತೆ ಯಾವುದೇ ಇಲಾಖೆಗಳು ವಿಳಂಬ ಮಾಡದಂತೆ ಆದೇಶ ನೀಡಲಾಗಿದೆ. ನ್ಯಾಯಾಲಯದ ಆದೇಶವಿದ್ದರೂ ಅಧಿಕಾರಿಗಳು ಮಾತ್ರ ಬದಲಾಗುವುದಿಲ್ಲ. ಮಾನವೀಯತೆ ದೃಷ್ಟಿಯಿಂದ ಇಂತಹ ಯೋಜನೆಗಳನ್ನು ಮಾಡಬೇಕು ಎಂದು ಸಲಹೆ ಮಾಡಿದರು.

## ಹಿರೋ ಹೊಸ ವಾಹನ ಬಿಡುಗಡೆ




ದಾವಣಗೆರೆ, ಫೆ. 14 - ಹಿರೋ ಡೀಲರ್ ಮೇ ಪ್ರಕಾಶ ಮೋಟರ್ಸ್, ಪಿ.ಬಿ ರಸ್ತೆ ದಾವಣಗೆರೆಯಲ್ಲಿ ಹೊಸ ಹೀರೊ Xoom ವಾಹನವನ್ನು, ನಿವೃತ್ತ ಲೆಫ್ಟಿನೆಂಟ್ ಕರ್ನಲ್ ಡಾ. ವೆಂಕಟೇಶ್ ನಾರ್ವೇಕರ್ ಹಾಗೂ ಪ್ರಕಾಶ ಮೋಟರ್ಸ್ ಮಾಲೀಕ ಜಯಪ್ರಕಾಶ್ ಅಂಬರ್‌ಕರ್ ರವರು ಪರಿಚಯಿಸಿದರು. Hero Xoom 110cc ವಾಹನವಾಗಿದ್ದು, ಅತ್ಯಾಧುನಿಕ ಕಾರ್ನರಿಂಗ್ ಲೈಟ್ಸ್ ಹೊಂದಿದ್ದು, ಇದು ಭಾರತದ ಸ್ಕೂಟರ್ ವಿಭಾಗದಲ್ಲಿ ಮೊಟ್ಟ ಮೊದಲನೆ ಬಾರಿ ಒಳಗೊಂಡಿದೆ. ಪ್ರಕಾಶ ಮೋಟರ್ಸ್ 19ನೇ ವಾರ್ಷಿಕದ ಸಂದರ್ಭದಲ್ಲಿ Hero Xoom ವಾಹನ ಪರಿಚಯ ಕಾರ್ಯಕ್ರಮ ನಡೆದಿದ್ದು ವಿಶೇಷತೆ.

# ಸೂರಗೊಂಡನಕೊಪ್ಪಕ್ಕೆ 10 ಕೋಟಿ ರೂ.

**(1ನೇ ಪುಟದಿಂದ)** ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಮಾತನಾಡಿ, ಬಂಜಾರ ಸಮುದಾಯದ ಅಭಿವೃದ್ದಿಗೆ ನಮ್ಮ ಸರ್ಕಾರ ಎಲ್ಲಾ ಅಭಿವೃದ್ದಿ ಕಾರ್ಯಗಳನ್ನು ಮಾಡಲಿದೆ. ಈಗಾಗಲೇ ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಘೋಷಿಸಲಾಗಿದೆ. ಮುಂದಿನ ದಿನಗಳಲ್ಲಿ 50 ಸಾವಿರ ಫಲಾನುಭವಿಗಳಿಗೆ ದಾವಣಗೆರೆ ಭಾಗದಲ್ಲಿ ಹಕ್ಕುಪತ್ರ ನೀಡಲಾಗುವುದು. ಶಿವಮೊಗ್ಗ ರಾಣೇಬೆನ್ನೂರು ರೈಲು ಮಾರ್ಗದ ಭಾಯ್‌ಗಡದಲ್ಲಿ ರೈಲು ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ರೈಲು ನಿಲ್ದಾಣವನ್ನು ನಿರ್ಮಾಣ ಮಾಡಲಾಗುವುದು ಎಂದರು.

ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಜನ್ಮಸ್ಥಳ ಅಭಿವೃದ್ಧಿಗೆ ಅವರದ್ದೇ ಕೊಡುಗೆ ಇದೆ ಈ ಕ್ಷೇತ್ರ ಎರಡನೇ ಧರ್ಮಸ್ಥಳ ಆಗಬೇಕು 83 ಕೋಟಿ ರೂ.ಗಳ ವೆಚ್ಚದಲ್ಲಿ ತುಂಗಾಭದ್ರಾ ನದಿಯಿಂದ ನ್ಯಾಮತಿ ಭಾಗದ ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜಾಗುತ್ತದೆ. ಮುಂದಿನ ವರ್ಷ ಸೂರಗೊಂಡನ ಕೊಪ್ಪ ಭಾಗಕ್ಕೆ ತುಂಗಾಭದ್ರಾ ನದಿ ನೀರು ಬರುತ್ತದೆ. ಕ್ಷೇತ್ರದ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಅನುದಾನವನ್ನು ಸಿಎಂ ನೀಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹೊನ್ನಾಳಿ ಶಾಸಕ ಎಂ.ಪಿ ರೇಣುಕಾಚಾರ್ಯ, ಕುಡುಚಿ ಶಾಸಕ ಬಂಜಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ. ರಾಜೀವ್, ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ಸಂತ ಸೇವಾಲಾಲ್ ಜನ್ಮಸ್ಥಳ ಮಹಾಮಠ ಸಮಿತಿಯ ಅಧ್ಯಕ್ಷರು ಹಾಗೂ ಮಾಜಿ ಸಚಿವರಾದ ರುದ್ರಪ್ಪ ಎಂ. ಲಮಾಣಿ ಸಮಾರಂಭದಲ್ಲಿ ಮಾತನಾಡಿದರು. ಮಾಜಿ ಶಾಸಕರಾದ ಚಂದ್ರನಾಯ್ಕ್, ಮಾಜಿ ಶಾಸಕ ಬಸವರಾಜ್ ಇತರೆ ಮುಖಂಡರು ಹಾಗೂ ಬಂಜಾರ ಸಮುದಾಯದ ಶ್ರೀಗಳು ಉಪಸ್ಥಿತರಿದ್ದರು.

# ಇಲ್ಲಿವರೆಗೆ ತೌಡು ಕುಟ್ಟಿದ ಸರ್ಕಾರ

**(1ನೇ ಪುಟದಿಂದ)** ಧ್ವನಿಯಾಗಿ ಕೆಲಸ ಮಾಡಿದೆ ಎಂದು ಹೇಳಿಸಲಾಗಿದೆ, ವಾಸ್ತವದಲ್ಲಿ ಈ ವರ್ಗದ ಜನರ ಪರವಾಗಿ ಸರ್ಕಾರ ಕೆಲಸ ಮಾಡಿಲ್ಲ ಎಂಬುದು ನನ್ನ ಅನಿಸಿಕೆ ಎಂದರು.

ರೈತರಿಗೆ ಹಲವು ಭರವಸೆಗಳನ್ನು ನೀಡಿದ್ದರು, ಆದರೆ ಯಾವೊಂದು ಭರವಸೆಯನ್ನೂ ಈಡೇರಿಸಲಿಲ್ಲ. ಹೀಗಾದರೆ ರೈತರ ಆದಾಯ ದುಪ್ಪಟ್ಟು ಆಗುವುದು ಹೇಗೆ? ಇದನ್ನೇ ನಾನು ಸುಳ್ಳು ಭಾಷಣ ಎಂದು ದೂರಿರುವುದು. ಇದು ಸಂಸದೀಯ ಪದವೂ ಹೌದು ಎಂದು ಸಮರ್ಥಿಸಿಕೊಂಡರು. ರೈತರ ಸಾಲವನ್ನು ಒಂದು ರೂಪಾಯಿ ಕೂಡ ಮನ್ನಾ ಮಾಡುವ ಕೆಲಸ ಮಾಡಿಲ್ಲ. ಹಿಂದೆ ಸಾಲ ಮನ್ನಾ ಮಾಡಿದ್ದು ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ, ಅದರಲ್ಲಿ ದಾಖಲೆ ನೀಡದೇ ಉಳಿದುಕೊಂಡ ಕೆಲವು ರೈತರ ಸಾಲ ಮನ್ನಾವನ್ನು ಈ ಸರ್ಕಾರ ಪೂರ್ಣಗೊಳಿಸುವ ಕೆಲಸ ಮಾಡಿದೆ ಎಂದರು.

ಇತ್ತೀಚೆಗೆ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ರೈತರ ಸಾಲ ಮನ್ನಾ ಮಾಡುವುದರಿಂದ ದೇಶಕ್ಕೆ ಉಪಯೋಗ ಇಲ್ಲ ಎಂದಿದ್ದಾರೆ. ಹಾಗಾದರೆ ಉದ್ಯಮಿಗಳು, ಬಂಡವಾಳಶಾಹಿಗಳ 12 ಲಕ್ಷ ಕೋಟಿಗೂ ಅಧಿಕ ಸಾಲವನ್ನು ಮನ್ನಾ ಮಾಡಿದ್ದಾರಲ್ಲ ಇದು ದೇಶಕ್ಕೆ ಒಳ್ಳೆಯದಾ? ಇದು ಬಿಜೆಪಿಯವರಿಗೆ ರೈತರ ಬಗ್ಗೆ ಇರುವ ಧೋರಣೆ. ರೈತರ ಬಗ್ಗೆ ಸರ್ಕಾರದ ಧೋರಣೆ ಬಾಯಲ್ಲಿ ಒಂದು, ಕೃತಿಯಲ್ಲಿ ಒಂದು ಇದೆ ಎಂದು ತರಾಟೆಗೆ ತೆಗೆದುಕೊಂಡರು.

# ಟ್ರಾಫಿಕ್ ಕಿರಿಕಿರಿ ತಪ್ಪಿಸಲು ಇರುವೆ ಮಾರ್ಗ !

**(1ನೇ ಪುಟದಿಂದ)** ಅಂತರ ಕಡಿಮೆಯಾಗುತ್ತದೆ. ಅವು ಹೆಚ್ಚು ದಕ್ಷವಾಗಿ ಮುಂದೆ ಸಾಗಲು ಸಾಧ್ಯವಾಗುತ್ತದೆ.

ಇರುವೆಗಳ ಈ ಗುಣಲಕ್ಷಣಗಳನ್ನು ಸ್ವಯಂ ಚಾಲಿತ ಕಾರುಗಳ ನಿರ್ವಹಣೆ ತಂತ್ರಜ್ಞಾನಕ್ಕೆಂದು ಅಧ್ಯಯನ ಮಾಡಲಾಗುತ್ತಿದೆ. ಸ್ವಯಂ ಚಾಲಿತ ಕಾರುಗಳ ದಕ್ಷವಾಗಿ ಚಲಿಸಲು ಇರುವೆಗಳ ಗುಣಗಳು ನೆರವಾಗುವ ನಿರೀಕ್ಷೆ ಇದೆ. ಸಂಚಾರ ನಿರ್ವಹಣೆಯಲ್ಲಿ ಇರುವೆಗಳು ದಕ್ಷ ಎಂಬುದೇನೋ ನಿಜ. ಆದರೆ, ಇದನ್ನು ಮಾನವ ವಾಹನಗಳ ನಿರ್ವಹಣೆಗೆ ಎಷ್ಟರ ಮಟ್ಟಿಗೆ ಅಳವಡಿಸಿಕೊಳ್ಳಬಹುದು ಎಂಬುದು ಶತಕೋಟಿ ಡಾಲರ್‌ಗಳ ಪ್ರಶ್ನೆ.

ಇರುವೆಗಳ ಗುರಿ ಒಂದೇ. ಆದರೆ, ಮನುಷ್ಯರು ವಾಹನ ಚಲಾಯಿಸುವಾಗ ಗುರಿಗಳು ಬೇರೆ ಇರುತ್ತವೆ. ಇರುವೆಗಳ ನಡುವೆ ನಿರಂತರ ಸಂಪರ್ಕ ಇರುತ್ತದೆ, ಚಾಲಕರ ನಡುವಿನ ಸಂಪರ್ಕ ಕಡಿಮೆ.

ಆದರೆ, ಸ್ವಯಂ ಚಾಲಿತ ಕಾರುಗಳ ಅಳವಡಿಕೆ ಮಾಡಲು ಮುಂದಾದರೆ, ಇರುವೆಗಳ ಮಾದರಿಯ ಸಾರಿಗೆ ವ್ಯವಸ್ಥೆ ಅಳವಡಿಕೆ ಬಗ್ಗೆ ಯೋಚಿಸಬಹುದಾಗಿದೆ. ಸ್ವಯಂ ಚಾಲಿತ ಕಾರುಗಳು ಪರಸ್ಪರ ಸಂವಹನ ನಡೆಸಬಹುದು, ದಟ್ಟಣೆಯ ದಾರಿ ತಪ್ಪಿಸಬಹುದು. ಇರುವೆಗಳು ರಾಸಾಯನಿಕ ಸಂಕೇತ ಬಳಸುವ ರೀತಿಯಲ್ಲೇ, ಸ್ವಯಂ ಚಾಲಿತ ಕಾರುಗಳು ಸಂಪರ್ಕ ಮಾಧ್ಯಮ ಬಳಸಬಹುದು.

ಸ್ವಯಂ ಚಾಲಿತ ಕಾರುಗಳು ಜೊತೆಯಾಗಿ ಕಾರ್ಯ ನಿರ್ವಹಿಸುವ ಮೂಲಕ ಸಂಚಾರ ದಟ್ಟಣೆಯನ್ನು ಗರಿಷ್ಠ ಮಟ್ಟದಲ್ಲಿ ಕಡಿಮೆ ಮಾಡಲು ಸಾಧ್ಯವಿದೆ. ಇನ್ನೊಂದು ರೀತಿ ಹೇಳುವುದಾದರೆ, ಆಗ ನಮ್ಮ ಸಂಚಾರ ವ್ಯವಸ್ಥೆ ಇರುವೆಗಳ ರೀತಿ ಆಗಲಿದೆ!

## ಬೇಲಿಮಲ್ಲೂರು ಗ್ರಾಮದ ಹಾಲಪ್ಪ ನಿಧನ



ಹೊನ್ನಾಳಿ ತಾಲ್ಲೂಕು ಬೇಲಿಮಲ್ಲೂರು ಗ್ರಾಮದ ವಾಸಿ ನಿವೃತ್ತ ಕೃಷಿ ಅಧಿಕಾರಿ **ಶರಣ ಹಾಲಪ್ಪ** (91) ಅವರು, ದಿನಾಂಕ : 14.02.2023ರ ಮಂಗಳವಾರ ಮಧ್ಯಾಹ್ನ 1.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮಕ್ಕಳು, ಮೊಮ್ಮಕ್ಕಳು, ಸಹೋದರಿಯರು, ಸೊಸೆಯಂದಿರು, ಅಳಿಯಂದಿರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿ. 15.02.2023ರ ಬುಧವಾರ ಮಧ್ಯಾಹ್ನ 2 ಗಂಟೆಗೆ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ**

## ನಾಳೆ ರೈತ ಸಂಘದಿಂದ ಬೆಂಗಳೂರು ಚಲೋ

ದಾವಣಗೆರೆ, ಫೆ.14- ದುಡಿಯುವ ಜನರ ಬವಣೆಗಳನ್ನು ನಿವಾರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದಿಂದ ನಾಡಿದ್ದು ದಿನಾಂಕ 16ರಂದು ಬೆಂಗಳೂರು ಚಲೋ ನಡೆಸಿ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾ ಸಮಾವೇಶ ನಡೆಸಲಾಗುವುದು ಎಂದು ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ರೈತರಿಗೆ ಪ್ರತಿ ಎಕರೆಗೆ 10 ಸಾವಿರ ರೂ. ಪ್ರೋತ್ಸಾಹ ಧನ ನೀಡಬೇಕು. ನೈಸರ್ಗಿಕ ಕೃಷಿಗೆ ಹೆಚ್ಚಿನ ಉತ್ತೇಜನ ನೀಡಬೇಕು. ಮಕ್ಕಳಿಗೆ ವಿಷಮುಕ್ತ ನೈಸರ್ಗಿಕ ಆಹಾರ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡರು ಗಳಾದ ಟಿ.ನುಲೇನೂರು ಎಂ.ಶಂಕರಪ್ಪ, ಮಂಜುಳಾ ಅಕ್ಕಿ, ಅರುಣ್ ಕುಮಾರ್ ಕುರುಡಿ, ಕರಿಲಕ್ಕೇನಹಳ್ಳಿ ಹನುಮಂತಪ್ಪ, ನಾಗೇಂದ್ರಪ್ಪ, ಹೊರಕೇರಪ್ಪ, ಬನ್ನೂರು ಕೃಷ್ಣಪ್ಪ, ಜಯಣ್ಣ ಇತರರು ಉಪಸ್ಥಿತರಿದ್ದರು.

## ಆರ್. ಚಂದ್ರಕಾಂತಮ್ಮ ನಿಧನ



ನಿಟುವಳ್ಳಿ ಹೊಸ ಬಡಾವಣೆ, 8ನೇ ಮುಖ್ಯರಸ್ತೆ, 6ನೇ ತಿರುವು (ಹೊಸ ಮಸೀದಿ ಹತ್ತಿರ) ವಾಸಿ, **ಡಿಆರ್‌ಕೆ ವೈಶ್ಯ ಫುಡ್** ಮಾಲೀಕರಾದ ಅಡುಗೆ ಕಂಟ್ರ್ಯಾಕ್ಟರ್ **ಡಿ.ಆರ್. ಕೃಷ್ಣಮೂರ್ತಿ ಶ್ರೇಷ್ಠಿ** ಅವರ ಧರ್ಮಪತ್ನಿ

**ಶ್ರೀಮತಿ ಆರ್. ಚಂದ್ರಕಾಂತಮ್ಮ**

ಅವರು ದಿನಾಂಕ : 13.02.2023ರ ಸೋಮವಾರ ತಡರಾತ್ರಿ 1.45 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 14.02.2023ರ ಮಂಗಳವಾರ ಮಧ್ಯಾಹ್ನ ವೈಕುಂಠ ಧಾಮದಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ - 98441 15025**

**ಡಿ.ಆರ್.ಕೆ. ವೈಶ್ಯ ಫುಡ್, ನಿಟುವಳ್ಳಿ - ದಾವಣಗೆರೆ.**

## ಸೃಷ್ಟಿ ಡಿ.ಎನ್. ಮುಳಗುಂದಿ ನಿಧನ



ಹರಿಹರ ವಾಸಿ, ಸೃಷ್ಟಿ ಡಿ.ಎನ್. ಮುಳಗುಂದಿ (21) ಇವರು ದಿನಾಂಕ: 14-2-2023 ರ ಮಂಗಳವಾರ ನಿಧನರಾದರು. ತಂದೆ-ತಾಯಿ, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 15-2-2023 ರ ಬುಧವಾರ ಮಧ್ಯಾಹ್ನ 11 ಗಂಟೆಗೆ ಮೃತರ ಸ್ವಗ್ರಾಮವಾದ ಹಿರೇಕೆರೂರು ತಾಲ್ಲೂಕು ಎತ್ತಿನಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಮಾದಾಪುರ ಬಳಿಯ ರಸ್ತೆ ಅಪಘಾತದಲ್ಲಿ ಯುವಕರಿಬ್ಬರ ಸಾವು

ದಾವಣಗೆರೆ, ಫೆ.14- ಬೈಕ್‌ಗೆ ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಯುವಕರು ಸಾವಿಗೀಡಾಗಿರುವ ಘಟನೆ ತಾಲ್ಲೂಕಿನ ಮಾದಾಪುರ ಕ್ರಾಸ್ ಬಳಿ ಘಟನೆ ನಡೆದಿದೆ.

ಮೋಹನ್ ನಾಯ್ಕ (30), ಪೂರ್ಯಾ ನಾಯ್ಕ (35) ಸಾವಿಗೀಡಾದ ಬೈಕ್ ಸವಾರರು. ದಾವಣಗೆರೆ ಕಡೆಯಿಂದ ಭದ್ರಾವತಿ ಕಡೆಗೆ ಚನ್ನಗಿರಿಗೆ ಮಾರ್ಗವಾಗಿ ಹೋಗುತ್ತಿದ್ದ ಖಾಸಗಿ ಬಸ್ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬೈಕಿಗೆ ಡಿಕ್ಕಿ ಹೊಡೆಯುತ್ತಿದ್ದಂತೆ ಚಾಲಕ ಬಸ್ ಬಿಟ್ಟು ಪರಾರಿಯಾದ್ದಾನೆ. ಮೃತರು ಶಿವಮೊಗ್ಗದ ವಿನೋಬನಗರದ ನಿವಾಸಿಗಳು ಎಂದು ತಿಳಿದು ಬಂದಿದೆ.

ಅಪಘಾತದಿಂದ ಕೆಲ ಕಾಲ ಟ್ರಾಫಿಕ್ ಜಾಮ್ ಆಗಿದ್ದು, ಪೊಲೀಸರು ಸಂಚಾರದ ಒತ್ತಡ ನಿಯಂತ್ರಣ ಮಾಡಲು ಹರಸಾಹಸ ಪಟ್ಟರು. ಸ್ಥಳಕ್ಕೆ ಹದಡಿ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

# ಕೆಂಗಾಪುರದಲ್ಲಿ ಇಂದಿನಿಂದ ಶಿವರಾತ್ರಿ ಸಪ್ತಾಹ



ಚನ್ನಗಿರಿ, ಫೆ. 14- ತಾಲ್ಲೂಕಿನ ಹರನಹಳ್ಳಿ- ಕೆಂಗಾಪುರದ ಶ್ರೀ ರಾಮಲಿಂಗೇಶ್ವರ ಮಠದಲ್ಲಿ ನಾಳೆ ದಿನಾಂಕ 15 ರಿಂದ 20ರವರೆಗೆ ಶಿವರಾತ್ರಿ ಸಪ್ತಾಹ ಮಹೋತ್ಸವ ನಡೆಯಲಿದೆ.

ಈ ಉತ್ಸವದಲ್ಲಿ ರಾಮಲಿಂಗೇಶ್ವರ ಸ್ವಾಮೀಜಿ ಅವರಿಂದ ಮುಳ್ಳುಗದ್ದುಗೆ ಉತ್ಸವ, ಧರ್ಮಸಭೆ, ಉಚಿತ ಸಾಮೂಹಿಕ ವಿವಾಹ, ಅಡ್ಡಪಲ್ಲಕ್ಕಿ ಉತ್ಸವ ಜರುಗಲಿವೆ.

ನಾಳೆ ದಿನಾಂಕ 15ರಂದು ಧರ್ಮ ಧ್ವಜಾರೋಹಣ, ಅನ್ನ ದಾಸೋಹದ ಅಕ್ಕಿ ಪೂಜೆ, ಕೆಂಗಾಪುರ ಗ್ರಾಮದ ಒಳಮಠದಲ್ಲಿ ಕರ್ತೃಗದ್ದುಗೆಗೆ ಪೂಜೆ ಸಲ್ಲಿಸಿ, ಹರನಹಳ್ಳಿಯಲ್ಲಿರುವ ಬೃಹನ್ಮಠಕ್ಕೆ ಉತ್ಸವದ ಮೂಲಕ ತೆರಳಿ ಅಲ್ಲಿನ ರಾಮಲಿಂಗೇಶ್ವರ ಸ್ವಾಮಿ ಗದ್ದುಗೆಗೆ ಪೂಜೆ ಸಲ್ಲಿಸಲಾಗುವುದು. 18 ರಂದು ಶಿವರಾತ್ರಿ ನಿಮಿತ್ತ ವಿಶೇಷ ಪೂಜೆ, ನಾಗದ್ದುಗಳ ಉತ್ಸವ, ಬ್ರಹ್ಮಮಾಲೆಗಳ ವಿತರಣೆ, ಸಂಜೆಯಿಂದ ಅಥಣಿಯ ರಾಮಲಿಂಗೇಶ್ವರ ಕಲಾ ತಂಡದಿಂದ ಸಂಗೀತ, ವಿದ್ಯಾಸಂಸ್ಥೆಯ ಮಕ್ಕಳಿಂದ ನಾನಾ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. 19ರ ಬೆಳಿಗ್ಗೆ 6 ರಿಂದ ಹರನಹಳ್ಳಿಯ ಹೊರ ಮಠದಿಂದ ಕೆಂಗಾಪುರದ ಒಳಮಠದವರೆಗೆ ರಾಮಲಿಂಗೇಶ್ವರ ಸ್ವಾಮೀಜಿಯವರ ಮುಳ್ಳುಗದ್ದುಗೆಯ ಅದ್ಧೂರಿ ಉತ್ಸವ ನಡೆಯಲಿದೆ. ರಾಜ್ಯ ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸುವರು.

ನಂತರ 10.30 ರಿಂದ ಉಚಿತ ಸಾಮೂಹಿಕ ವಿವಾಹ ಹಾಗೂ ಧರ್ಮ ಸಭೆ ನಡೆಯಲಿದೆ. ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ ರಾಮಲಿಂಗೇಶ್ವರ ಸ್ವಾಮೀಜಿ ಹಾಗು ವಿವಿಧ ಮಠಾಧೀಶರು ಪಾಲ್ಗೊಳ್ಳುವರು. 20ರಂದು ರಾಮಲಿಂಗೇಶ್ವರ ಸ್ವಾಮೀಜಿಯವರಿಂದ ಆಶೀರ್ವಚನ ನಂತರ ಅಡ್ಡಪಲ್ಲಕ್ಕಿ ಉತ್ಸವ ನಡೆಯಲಿದೆ ಎಂದು ಎಂದು ಮಠದ ವ್ಯವಸ್ಥಾಪಕ ಹೆಚ್.ಆರ್. ವಿಜಯಕುಮಾರ್ ತಿಳಿಸಿದ್ದಾರೆ.



## ಕಾಂಗ್ರೆಸ್ ರಾಜ್ಯ ಸಮಿತಿಗೆ ಹಡಗಲಿ ರವೀಂದ್ರ

ಹೂವಿನಹಡಗಲಿ, ಫೆ. 14- ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಕಾರ್ಯದರ್ಶಿಯಾಗಿ ಪಟ್ಟಣದ ವಕೀಲ ಗುರುವಿನ ರವೀಂದ್ರ (ರಾಜು) ನೇಮಕಗೊಂಡಿದ್ದಾರೆ.

# ರೈತರ ಕೃಷಿ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು

## ರಾಣೇಬೆನ್ನೂರು ರೈತರ ಪ್ರತಿಭಟನೆಯಲ್ಲಿ ಸಿಎಂಗೆ ರವೀಂದ್ರಗೌಡ ಪಾಟೀಲ ಒತ್ತಾಯ



ರಾಣೇಬೆನ್ನೂರು, ಫೆ.14- ಸಾಲ ಮನ್ನಾದ ಬಗ್ಗೆ ಹಗುರವಾಗಿ ಮಾತನಾಡಿದ ತೇಜಸ್ವಿ ಸೂರ್ಯ ಅವರನ್ನು ಪಕ್ಷದಿಂದ ವಜಾಗೊಳಿಸಿ, ನಾಳೆಯ ಬಜೆಟ್‌ನಲ್ಲಿ ಡಬಲ್ ಇಂಜಿನ್ ಸರ್ಕಾರ ರೈತರ ಸಾಲ ಮನ್ನಾ ಯೋಜನೆ ಘೋಷಿಸಿ ರೈತ ಪರ ಸರ್ಕಾರ ಎನ್ನುವುದನ್ನು ಮುಖ್ಯ ಮಂತ್ರಿಗಳು ಸಾಬೀತು ಪಡಿಸಬೇಕು ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಒತ್ತಾಯಿಸಿದ್ದಾರೆ.

ಇಲ್ಲಿನ ಕೇಂದ್ರ ಬಸ್ ನಿಲ್ದಾಣದ ಹತ್ತಿರ ರೈತಪರ ಸಂಘಟನೆಗಳು ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆ, ರಸ್ತೆ ತಡೆ ಕಾರ್ಯಕ್ರಮದ ನೇತೃತ್ವ ವಹಿಸಿ ಅವರು ಮಾತನಾಡಿದರು.

ಕಳೆದ 14 ವರ್ಷಗಳಲ್ಲಿ ವಿಜಯ ಮಲ್ಯ, ನೀರವ್ ಮೋದಿ, ಅದಾನಿ, ಅಂಬಾನಿಯಂತಹ ಬಂಡವಾಳ ಶಾಹಿಗಳ ಹದಿನಾಲ್ಕು ಲಕ್ಷ ಕೋಟಿ. ರೂ. ಸಾಲ ಮನ್ನಾ ಮಾಡಿದ ಕೇಂದ್ರ ಸರ್ಕಾರ ರೈತರ ವಿಚಾರದಲ್ಲಿ ಮಾತ್ರ ಮೊಸಳೆ ಕಣ್ಣೀರು ಸುರಿಸುತ್ತಿದೆ. ರೈತರಿಗೊಂದು ನ್ಯಾಯ? ಉದ್ಯಮಿಗಳಿಗೊಂದು ನ್ಯಾಯಾನಾ? ಅಂತಾ ಪಾಟೀಲರು ಪ್ರಶ್ನಿಸಿದ್ದಾರೆ.

2008-09 ನೇ ಸಾಲಿನಲ್ಲಿ ಆಗಿನ ಪ್ರಧಾನ ಆರ್ಥಿಕ ತಜ್ಞ ಡಾ. ಮನಮೋಹನ್ ಸಿಂಗ್ ನೇತೃತ್ವದ ಕೇಂದ್ರ ಸರ್ಕಾರ ದೇಶದ ರೈತರ 78 ಸಾವಿರ ಕೋಟಿ ರೂ. ಸಾಲ ಮನ್ನಾ ಮಾಡಿತು, ರೈತರು ಇಷ್ಟೊಂದು ಆರ್ಥಿಕ ತೊಂದರೆಯಲ್ಲಿರಲಿಲ್ಲ. ರೈತರ ಆತ್ಮಹತ್ಯೆಯೂ ದೇಶದಲ್ಲಿ ನಡೆಯುತ್ತಿರಲಿಲ್ಲ. ಆದರೆ ರೈತಾಪಿ ವರ್ಗ ಅತೀವೃಷ್ಟಿ, ಅನಾವೃಷ್ಟಿ, ಕೊರೊನಾ, ಲಾಕ್‌ಡೌನ್‌ನಿಂದ ಆರ್ಥಿಕ ತೊಂದರೆಗೆ ಸಿಲುಕಿ ದಿನನಿತ್ಯ ಸರಣಿ ರೈತ ಆತ್ಮಹತ್ಯೆಗಳು ನಡೆಯುತ್ತಲಿವೆ. ರಾಜ್ಯದಲ್ಲಿ ಮುಖ್ಯಮಂತ್ರಿಗಳ ತವರು ಜಿಲ್ಲೆ ರೈತರ ಆತ್ಮಹತ್ಯೆಯಲ್ಲಿ ಪ್ರಥಮ ಸ್ಥಾನದ ಲ್ಲಿದೆ. ಹೀಗಿರುವಾಗ ನಾಳೆಯ ಬಜೆಟ್‌ನಲ್ಲಿ ರೈತರ ರಾಷ್ಟ್ರೀಕೃತ ಬ್ಯಾಂಕಿನ ಲ್ಲಿರುವ ರೈತರ ಕೃಷಿ ಸಾಲವನ್ನು ಸಂಪೂರ್ಣ ಮನ್ನಾ ಯೋಜನೆ ಘೋಷಿಸಬೇಕು. ಇಲ್ಲದಿದ್ದರೆ ಬರುವ ಚುನಾವಣೆಯಲ್ಲಿ ರೈತರು ತಮಗೆ ತಕ್ಕ ಪಾಠ ಕಲಿಸುತ್ತಾರೆಂದು ಎಚ್ಚರಿಸಿದರು.

ರೈತ ಮುಖಂಡರಾದ ಬಿ.ಕೆ. ರಾಜನಹಳ್ಳಿ, ಇಕ್ಬಾಲ್ ಸಾಬ್ ರಾಣೇಬೆನ್ನೂರು, ಚಂದ್ರಣ್ಣ ಬೇಡರ, ಸುರೇಶಪ್ಪ ಗರಡಿಮನಿ, ರೇಣುಕಾ ಲಮಾಣಿ ಮಾತನಾಡಿದರು. ಮುಖ್ಯಮಂತ್ರಿಗಳಿಗೆ ತಹಶೀಲ್ದಾರ್‌ರ ಮೂಲಕ ಮನವಿ ಸಲ್ಲಿಸಲಾಯಿತು. ತಹಶೀಲ್ದಾರರ ಪರವಾಗಿ ಕಂದಾಯ ನಿರೀಕ್ಷಕ ಅಶೋಕ ಅರಳೇಶ್ವರ ಮನವಿ ಸ್ವೀಕರಿಸಿದರು.

ರೈತ ಮುಖಂಡರಾದ ಹರಿಹರಗೌಡ ಪಾಟೀಲ, ಚಾಮನಗೌಡ ಪಾಟೀಲ, ಗುರುರಾಜ ಗೊಜನೂರ, ಶಂಕರಗೌಡ ಪಾಟೀಲ, ಕರಬಸಪ್ಪ ಕೂಲೇರ, ವಕೀಲರಾದ ರಮೇಶ ಗೊಂದಳ್ಳಿ, ಮರಡೆಪ್ಪ ಚಳಗೇರಿ, ಕೊಟ್ರಪ್ಪ ಹೊನ್ನತ್ತಿ, ಯಲ್ಲಪ್ಪ ಓಲೇಕಾರ ಮತ್ತಿತರರು ಭಾಗವಹಿಸಿದ್ದರು.

# ಬೇಸಿಗೆ ತಿಂಗಳಲ್ಲಿ ಅಡಿಕೆ ಬೆಳೆಗೆ ನುಸಿ ಕೀಟದ ಬಾಧೆ

## ಬೇತೂರಿನಲ್ಲಿ ಪ್ರಧಾನ ರೈತ ತರಬೇತಿ ಕಾರ್ಯಕ್ರಮದಲ್ಲಿ ವಿಜ್ಞಾನಿ ಬಸವನಗೌಡ ಎಚ್ಚರಿಕೆ



ದಾವಣಗೆರೆ, ಫೆ.14- ಬರುವ ಬೇಸಿಗೆ ತಿಂಗಳಲ್ಲಿ ಉಷ್ಣಾಂಶದ ಹೆಚ್ಚಳದಿಂದ ಅಡಿಕೆ ಬೆಳೆಗೆ ನುಸಿ ಕೀಟದ ಬಾಧೆ ಹೆಚ್ಚಾಗುವ ಆತಂಕವಿದೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ತಿಳಿಸಿದರು. ಬೇತೂರು ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿ, ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಹಾಗೂ ಕೃಷಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಚಿಕ್ಕನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರಧಾನ ರೈತರ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬೇಸಿಗೆಯಲ್ಲಿ ತೋಟಗಳಲ್ಲಿ ಹಸಿರು ಹೊದಿಕೆ ಇರಬೇಕು. ಹೊಲದಲ್ಲಿ ಭೂಮಿ ಸ್ವಚ್ಛ ವಿದ್ದರೆ ತೋಟಗಳಲ್ಲಿ ಆಂತರಿಕ ಉಷ್ಣಾಂಶ ಹೆಚ್ಚಾಗುವುದು. ಇದರಿಂದ ರಸ ಹೀರುವ ಕೀಟಗಳ ಬಾಧೆ ಹೆಚ್ಚಾಗುವುದು. ಇದರ ನಿಯಂತ್ರಣಕ್ಕೆ ಹೆಕ್ಸಿತೈಯೊಜಾಕ್ಸ್ 1.5 ಮಿಲೀ ಅಥವಾ ಪ್ರೊಪಾರ್‌ಗೈಟ್ 1.5 ಮಿಲೀ ಪ್ರತೀ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕೆಂದು ತಿಳಿಸಿದರು.

ಮಣ್ಣಿನ ಗುಣಧರ್ಮಕ್ಕನುಸಾರವಾಗಿ ನೀರಿನ ನಿರ್ವಹಣೆಯನ್ನು ಮಾಡಬೇಕು. ಜೊತೆಗೆ ವೈಜ್ಞಾನಿಕ ಕೃಷಿ ಪದ್ಧತಿಯನ್ನು ಅನುಸರಿಸುವ ಮೂಲಕ ಇಳುವರಿಯ ಸುಸ್ಥಿರತೆಯನ್ನು ಪಡೆಯಬೇಕೆಂದು ತಿಳಿಸಿದರು.

ಸಹಾಯಕ ಕೃಷಿ ನಿರ್ದೇಶಕ ಶ್ರೀಧರ ಮೂರ್ತಿ ಮಾತನಾಡಿ, ರೈತ ಉತ್ಪಾದಕ ಕಂಪನಿಯಿಂದ ಸಾವಯವ ರಾಸಾಯನಿಕ ಮುಕ್ತ ಬೆಲ್ಲದ ಉತ್ಪಾದನೆ ಹಾಗೂ ಮಾರುಕಟ್ಟೆಗೆ ಉತ್ತಮ ಬೇಡಿಕೆಯಿದೆ. ರೈತರು ಇದರ ಸದುಪಯೋಗ ಮಾಡಿಕೊಳ್ಳಬೇಕೆಂದರು. ಬೆಳೆಗಳಿಗೆ ಸಮಗ್ರ ಪೋಷಕಾಂಶ ನಿರ್ವಹಣೆ, ಜೈವಿಕ ಗೊಬ್ಬರಗಳ ಬಳಕೆ, ಹಸಿರೆಲೆ ಗೊಬ್ಬರಗಳ ಬಳಕೆ ಮಾಡಬೇಕು ಎಂದು ತಿಳಿಸಿದರು.

ಕಂಪನಿಯ ಅಧ್ಯಕ್ಷ ಉಮೇಶ್ ಮಾತನಾಡಿ, ಕಂಪನಿ ವತಿಯಿಂದ ರೈತರಿಗೆ ಗುಣಮಟ್ಟದ ಬೀಜ ಮತ್ತು ರಸಗೊಬ್ಬರಗಳನ್ನು ಪೂರೈಸುತ್ತಿದ್ದು, ರೈತರು ಮಣ್ಣು ಪರೀಕ್ಷೆ ಮಾಡಿಸಿ ಪೋಷಕಾಂಶಗಳನ್ನು ನೀಡಬೇಕೆಂದು ಕರೆ ನೀಡಿದರು.

ಅಡಿಕೆ ಬೆಳೆಯ ರೋಗ ಮತ್ತು ಕೀಟಗಳ ಬಗ್ಗೆ ಕೇಂದ್ರದ ಸಸ್ಯ ಸಂರಕ್ಷಣೆ ವಿಜ್ಞಾನಿ ಡಾ. ಟಿ.ಜಿ. ಅವಿನಾಶ್ ಮಾಹಿತಿ ನೀಡಿದರು. ನಿರ್ದೇಶಕ ವಿಜಯಕುಮಾರ್, ಅಧಿಕಾರಿ ಆಕಾಶ್, ರೈತ ರಾದ ಶಂಕರ್, ಲಿಂಗರಾಜು, ಬಸವರಾಜ, ಸಿದ್ದನಗೌಡರು ಸೇರಿದಂತೆ ಇತರೆ ರೈತರು ಹಾಜರಿದ್ದರು.

# ಹರಿಹರದಲ್ಲಿ 'ತನುಜಾ' ಚಿತ್ರ ; ಉಚಿತ ಪ್ರದರ್ಶನ



ಹರಿಹರ, ಫೆ. 14- ತಾಲ್ಲೂಕಿನ ಬಿಜೆಪಿ ಯುವ ನಾಯಕ ಚಂದ್ರಶೇಖರ್ ಪೂಜಾರ್ ಹನಗವಾಡಿ ಅವರ ನೇತೃತ್ವದಲ್ಲಿ ಬಿ.ಎಸ್. ಯಡಿಯೂರಪ್ಪ ಅಭಿಮಾನಿಗಳ ಬಳಗದ ವತಿಯಿಂದ ಇತ್ತೀಚೆಗೆ ಬಿಡುಗಡೆಯಾದ ತನುಜಾ ಚಿತ್ರವನ್ನು ಉಚಿತವಾಗಿ ವಿದ್ಯಾರ್ಥಿಗಳು, ಪೋಷಕರು, ಯುವ ಸಮೂಹ ಗ್ರಾಮೀಣ ರೈತ ಕುಟುಂಬದವರ ವೀಕ್ಷಣೆಗಾಗಿ ಆಯೋಜನೆ ಮಾಡಲಾಗಿದೆ.

ಈ ಕುರಿತು ಆಯೋಜಕ ಚಂದ್ರಶೇಖರ್ ಪೂಜಾರ್ ಮಾತನಾಡಿ, ತನುಜಾ ಚಲನಚಿತ್ರ ಪ್ರದರ್ಶನವು ನಗರದ ಶ್ರೀಕಾಂತ ಚಿತ್ರಮಂದಿರದಲ್ಲಿ ಫೆ. 10 ರಿಂದಲೇ ಆರಂಭಿಸಲಾಗಿದೆ. ಫೆ. 16ರವರೆಗೆ ಪ್ರತಿದಿನ ನಾಲ್ಕು ಪ್ರದರ್ಶನಗಳಲ್ಲಿ ಉಚಿತವಾಗಿ ನೋಡಬಹುದಾಗಿದೆ. ಈಗಾಗಲೇ ಸಹಸ್ರಾರು ಸಂಖ್ಯೆಯಲ್ಲಿ ಚಿತ್ರ ವೀಕ್ಷಣೆ ಮಾಡಿದ್ದು, ಈ ಚಿತ್ರವನ್ನು ಎಲ್ಲರೂ ನೋಡಿ ಉಳಿದವರಿಗೆ ಪ್ರೇರೇಪಣೆಯಾಗಬೇಕೆಂದು ವಿನಂತಿಸಿದ್ದಾರೆ.

ನೈಜ ಘಟನೆಯನ್ನು ಆಧರಿಸಿ ಚಿತ್ರಿಸಲಾದ ತನುಜಾ ಚಿತ್ರವು ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಅವರ ಲೇಖನ ಒಂದನ್ನು ಆಧರಿಸಿ ತಯಾರಿಸಿದ ಚಲನಚಿತ್ರವಾಗಿದೆ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಆರೋಗ್ಯ ಸಚಿವ ಸುಧಾಕರ್ ಅವರ ಕಾರ್ಯಕ್ಷಮತೆಯನ್ನು ಈ ಸಿನಿಮಾದ ಮೂಲಕ ತೋರಿಸಲಾಗಿದೆ. ಅವರದೇ ಪಾತ್ರಗಳನ್ನು ಅವರದೇ ನಟನೆಯಿಂದ ಚಿತ್ರಿಸಿರುವುದು ಈ ಚಿತ್ರದ ವಿಶೇಷವಾಗಿದೆ.

ಗ್ರಾಮೀಣ ಪ್ರದೇಶದ ತನುಜಾ ಎಂಬ ಯುವತಿಯು ನೀಟ್ ಪರೀಕ್ಷೆ ಬರೆದು ವೈದ್ಯೆಯಾಗುವ ಕನಸು ಹೊತ್ತು ಅಭ್ಯಾಸ ನಡೆಸಿರುತ್ತಾಳೆ. ಕೊರೊನಾ ಕಾರಣಕ್ಕಾಗಿ ಅವಳು ಪರೀಕ್ಷೆ ಬರೆಯಲು ಆಗದೇ ಇರುವ ಪ್ರಸಂಗ ಒದಗಿ ಬಂದಿರುತ್ತದೆ. ಈ ಘಟನೆಯನ್ನು ವಿಶ್ವೇಶ್ವರ ಭಟ್ ಅವರು ಅಂದಿನ ಮುಖ್ಯಮಂತ್ರಿಗಳ ಗಮನಕ್ಕೆ ತಂದು ವಿಶೇಷ ಕಾನೂನಿನಡಿ ಆಕೆಗೆ ಪರೀಕ್ಷೆಯನ್ನು ಬರೆಸಲಾಗುತ್ತದೆ. ಮುಂದೆ ಆಕೆ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮೆಡಿಕಲ್ ಕೋರ್ಸಿಗೆ ಪ್ರವೇಶ ಪಡೆಯುತ್ತಾಳೆ. ಇಂತಹ ಒಳ್ಳೆಯ ಚಿತ್ರವನ್ನು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ನೋಡಲೇಬೇಕಾದ ಕಾರಣಕ್ಕಾಗಿ ನಾನು ಒಂದು ವಾರಗಳ ಕಾಲ ನನ್ನದೇ ಸ್ವಂತ ಖರ್ಚಿನಲ್ಲಿ ಪ್ರದರ್ಶನಕ್ಕೆ ಅವಕಾಶ ಮಾಡಿ ಕೊಟ್ಟಿರುತ್ತೇನೆ. ಇದರ ಲಾಭವನ್ನು ಹರಿಹರ ತಾಲ್ಲೂಕಿನ ಪ್ರತಿಯೊಬ್ಬರೂ ಪಡೆದುಕೊಳ್ಳಬೇಕು ಎಂಬುದು ನನ್ನ ಅಭಿಲಾಷೆಯಾಗಿದೆ. ಇಂತಹದ್ದೊಂದು ಉತ್ತಮ ಚಿತ್ರವನ್ನು ತೆರೆಗೆ ತಂದ ನಿರ್ಮಾಪಕರಿಗೂ ಹಾಗೂ ನಿರ್ದೇಶಕರಿಗೂ ಅಭಿನಂದನೆ ಸಲ್ಲಿಸುತ್ತಿರುವುದಾಗಿ ಚಂದ್ರಶೇಖರ್ ಪೂಜಾರ್ ತಿಳಿಸಿದರು.

## ಪ್ರಜಾಪ್ರಭುತ್ವದ ಯಶಸ್ವಿಗೆ ನೀವೇ ಭಾಜ್ಯರು: ಸಿದ್ದರಾಮ ಕಲ್ಮಠ



**ಕೊಟ್ಟೂರು**

ಕೊಟ್ಟೂರು, ಫೆ. 14 - ಕೊಟ್ಟೂರೇಶ್ವರ ಮಹಾವಿದ್ಯಾಲಯ ಕೊಟ್ಟೂರು ಹಾಗೂ ತಾಲ್ಲೂಕು ಆಡಳಿತ ಕಚೇರಿ ಜಿಲ್ಲಾ ಪಂಚಾಯಿತಿ ಜಿಲ್ಲಾ ಸ್ವೀಪ್ ಸಮಿತಿ ರಾಜ್ಯಶಾಸ್ತ್ರ ವಿಭಾಗ ಹಾಗೂ ಎನ್.ಎಸ್.ಎಸ್ ಹಾಗೂ ಎನ್.ಸಿ.ಸಿ ಐಕ್ಯೂಎಸಿ ಸಹಭಾಗಿತ್ವದಲ್ಲಿ ರಾಷ್ಟ್ರೀಯ ಮತದಾರ ದಿನಾಚರಣೆಯನ್ನು ಕೊಟ್ಟೂರೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹಾಗೂ ಪ್ರತಿಜ್ಞಾ ವಿಧಿಯನ್ನು ಬೋಧಿಸಿದ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಸಿದ್ದರಾಮ ಕಲ್ಮಠ ಮಾತನಾಡಿ, ಮುಂದಿನ ಮತದಾರರು ನೀವು. ಹಾಗಾಗಿ ಪ್ರಜಾಪ್ರಭುತ್ವದ ಯಶಸ್ವಿಗೆ ನೀವೇ ಭಾಜನರಾಗುತ್ತೀರಿ ಎಂದು ಹೇಳಿದರು.

ಪ್ರಾಂಶುಪಾಲ ಪ್ರೊ. ಶಾಂತಮೂರ್ತಿ ಕುಲಕರ್ಣಿ ಮಾತನಾಡಿ, ಮತದಾರರು ಮತದಾನವನ್ನು ಮಾಡುವುದು ಅಗತ್ಯ ಮತ್ತು ಮಹತ್ವವನ್ನು ಇಂದಿನ ಆಧುನಿಕ ಯುಗಕ್ಕೆ ಅನಿವಾರ್ಯ ಎಂದರು.

ವಿಶೇಷ ಉಪನ್ಯಾಸ ನೀಡಿದ ಕಾಲೇಜಿನ ಉಪನ್ಯಾಸಕ ಎಂ. ರವಿಕುಮಾರ್ ಮಾತನಾಡಿ, ಪ್ರಜಾಪ್ರಭುತ್ವ ಪ್ರಜೆಗಳಿಂದ ಪ್ರಜಾಪ್ರಭುತ್ವದ ಮಾದರಿಯನ್ನು ಯಶಸ್ವಿಗೊಳಿಸಲು ರಾಷ್ಟ್ರೀಯ ಮತದಾರರ ದಿನಾಚರಣೆ ಅರ್ಥಪೂರ್ಣ ಎಂದು ಹೇಳಿದರು.

ಪಟ್ಟಣ ಪಂಚಾಯ್ತಿ ಮುಖ್ಯ ಅಧಿಕಾರಿ ನಸರುಲ್ಲಾ ಉಪಸ್ಥಿತರಿದ್ದರು. ಉಪನ್ಯಾಸಕ ಅರವಿಂದ್ ಬಸಾಪುರ ನಿರೂಪಿಸಿದರು. ಸಹಾಯಕ ಪ್ರಾಧ್ಯಾಪಕ ರಾಜ್ಯಶಾಸ್ತ್ರ ವಿಭಾಗ ಪ್ರೊ. ರಾಧಾಸ್ವಾಮಿ ಸ್ವಾಗತಿಸಿದರು. ಶಶಿಕುಮಾರ್ ವಂದಿಸಿದರು.

## ಶ.ಸಾ. ಪರಿಷತ್ ಗೌರವಾಧ್ಯಕ್ಷರಾಗಿ ಎಂ.ಎಸ್. ನಾಗರಾಜಪ್ಪ ಮೆಳ್ಳೇಕಟ್ಟೆ



ದಾವಣಗೆರೆ, ಫೆ. 14 - ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನಿಂದ ನಗರದ ಸೇವಾದಳ ಕಚೇರಿಯಲ್ಲಿ ಮಾಸಿಕ ಸಭೆ ಹಮ್ಮಿಕೊಳ್ಳಲಾಗಿತ್ತು. ಸಭೆಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ದಾವಣಗೆರೆ ನಗರ ಘಟಕದ ಗೌರವಾಧ್ಯಕ್ಷರಾಗಿ ಎಂ.ಎಸ್. ನಾಗರಾಜಪ್ಪ ಮೆಳ್ಳೇಕಟ್ಟೆ ಅವರನ್ನು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಅವರು ನೇಮಿಸಿ ಆದೇಶ ಪತ್ರ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಎನ್.ಎಸ್. ರಾಜು, ನಗರ ಘಟಕದ ಅಧ್ಯಕ್ಷ ಎಂ.ಪರಮೇಶ್ವರಪ್ಪ ಸಿರಿಗೆರೆ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಕುರುಡಿ ಅರುಣಕುಮಾರ್ ಮತ್ತು ಲಾಯರ್ ಯೋಗೀಶ್ ಅವರನ್ನು ಕಾರ್ಯಕಾರಿ ಸಮಿತಿಗೆ ಸೇರ್ಪಡೆ ಮಾಡಲಾಯಿತು. ಬಿ.ಎಂ ಮಲ್ಲಿಕಾರ್ಜುನ ಸ್ವಾಮಿ, ಸೌಮ್ಯ ಸತೀಶ್ ಶರಣರ ವಚನ ಗಾಯನ ನಡೆಸಿಕೊಟ್ಟರು.

## ಇಂದು ಜಗಳೂರು ಇಮಾಂ ಸಾಹೇಬರ 125ನೇ ಜನ್ಮ ದಿನಾಚರಣೆ

**ರಂಜಾನ್ ದರ್ಗಾಗೆ ಇಮಾಂ ಟ್ರಸ್ಟ್ ರಾಜ್ಯ ಪ್ರಶಸ್ತಿ ಪ್ರದಾನ**

ದಾವಣಗೆರೆ, ಫೆ. 14 - ನಾಳೆ ದಿನಾಂಕ 15ರ ಬುಧವಾರದಂದು ಜಗಳೂರಿನ ಜೆ.ಎಂ. ಇಮಾಂ ಶಾಲೆಯಲ್ಲಿ ಬೆಳಿಗ್ಗೆ 11 ಗಂಟೆಗೆ ಜಗಳೂರು ಮಹಮ್ಮದ್ ಇಮಾಂ ಅವರ 125ನೇ ಜನ್ಮ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ ಎಂದು ಜೆ.ಎಂ. ಇಮಾಂ ಪ್ರಶಸ್ತಿ ಸಲಹಾ ಸಮಿತಿ ಅಧ್ಯಕ್ಷ ಎನ್.ಟಿ. ಎರ್ರಿಸ್ವಾಮಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಗತಿಪರ ಲೇಖಕ ಹಾಗೂ ಶರಣ ಸಾಹಿತ್ಯ ಸಂಶೋಧಕ ರಂಜಾನ್ ದರ್ಗಾ ಅವರಿಗೆ ಜೆ.ಎಂ. ಇಮಾಂ ಟ್ರಸ್ಟ್ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೆ.ಎಂ. ಇಮಾಂ ಟ್ರಸ್ಟ್ ಅಧ್ಯಕ್ಷ ಜೆ.ಕೆ. ಹುಸೇನ್ ಮಿಯ್ಯಾ ಸಾಬ್ ವಹಿಸಲಿದ್ದಾರೆ. ಉದ್ಘಾಟನೆಯನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಗೌರವ ಸಲಹೆಗಾರ ಗೊ.ರು. ಚನ್ನಬಸಪ್ಪ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಎಸ್.ವಿ. ರಾಮಚಂದ್ರ, ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ, ಸಾಹಿತಿ ಡಾ. ರಹಮತ್ ತರೀಕೆರೆ ಮತ್ತಿತರರು ಭಾಗವಹಿಸಲಿದ್ದಾರೆ.

ಇದೇ ವೇಳೆ ಜೆ.ಎಂ. ಇಮಾಂ ಅವರು ರಚಿಸಿದ 'ಮೈಸೂರು ಆಗ ಮತ್ತು ಈಗ' ಕೃತಿ ಬಿಡುಗಡೆ ಮಾಡಲಾಗುವುದು ಎಂದವರು ಹೇಳಿದರು.

ದಾವಣಗೆರೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ದಾದಾಪೀರ್ ನವಿಲೇಹಾಳ್ ಮಾತನಾಡಿ, ಜಗಳೂರಿನ ಮುಖ್ಯ ವೃತ್ತಕ್ಕೆ ಇಮಾಂ ಸಾಬ್ ಅವರ ಹೆಸರು ಇಡಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಿವೃತ್ತ ಉಪನ್ಯಾಸಕ ಡಿ.ಸಿ. ಮಲ್ಲಿಕಾರ್ಜುನ, ನಿವೃತ್ತ ಮುಖ್ಯೋಪಾಧ್ಯಾಯ ಎಸ್. ಹಾಲಪ್ಪ ಉಪಸ್ಥಿತರಿದ್ದರು.

### ಗ್ರಾಮ ಪಂಚಾಯಿತಿ ಕಾರ್ಯಾಲಯ, ಬೇತೂರು.

ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಸಂಖ್ಯೆ:ಗ್ರಾಪಂ.ಬೇ.ಸಿಆರ್/2022-23 ದಿನಾಂಕ: 10.02.2023

**ಟೆಂಡರ್ ಪ್ರಕಟಣೆ**

ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕಿನ ಬೇತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2020-21 ಮತ್ತು 2021-22ನೇ ಸಾಲಿನ ವರ್ಗ-01ರ ಯೋಜನೆಯಡಿ ಆರೋಗ್ಯಕರ ಬಾಬ್ತು ಹಣವನ್ನು ಬೇತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಿಗೆ ಅಗತ್ಯವಿರುವ ವಿವಿಧ ಸಾಧನ ಸಲಕರಣೆಗಳನ್ನು ಖರೀದಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ರಂತೆ ಬೇತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈ ಕೆಳಕಂಡ ಸಾಮಾಗ್ರಿಗಳ ಖರೀದಿಗಾಗಿ ನೊಂದಾಯಿತ ಅರ್ಹ ಸರಬರಾಜುದಾರರಿಂದ ಟೆಂಡರ್ ಕರೆಯಲಾಗಿದ್ದು, ಸರಬರಾಜುದಾರರು ಬೇತೂರು ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಕಛೇರಿ ಕೆಲಸದ ಸಮಯದಲ್ಲಿ ಅರ್ಜಿ ಪಡೆದು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಬೇತೂರು ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಸಂಪರ್ಕಿಸಬಹುದು. **ಸಾಮಾಗ್ರಿಗಳ ವಿವರ:-** (1) ಗೋದ್ರೇಜ್ ಬೀರು, ಆಫೀಸ್ ಟೇಬಲ್, ಖುರ್ಚಿಗಳು, ಕಬ್ಬಿಣದ ರ್‍ಯಾಕ್, ಮಕ್ಕಳ ಚೇರ್ =87,215/- (2) ಮಿಕ್ಸಿ, ಫ್ಯಾನ್, ಊಟದ ತಟ್ಟೆ, ನೀರಿನ ಕ್ಯಾನ್=65,000/- (3) ಜಮಖಾನ, ಸೊಳ್ಳೆಪರದೆ-15,000/- (4) ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಸಿಂಟೆಕ್ಸ್-ರೂ. 16,500/- (5) ಅಂಗನವಾಡಿ ಕೇಂದ್ರಗಳಿಗೆ ಚಿತ್ರ ಬಿಡಿಸುವುದು ರೂ. 60,000/- ಈ ಮೇಲ್ಕಂಡ ಸಾಮಾಗ್ರಿಗಳಿಗೆ ಐಟಂವಾರು ವಿವರಗಳನ್ನು ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಬಂದು ಪಡೆದುಕೊಳ್ಳುವುದು.

**1) ಟೆಂಡರ್ ಸ್ವೀಕರಿಸುವ ಪ್ರಾಧಿಕಾರ ಅಧ್ಯಕ್ಷರು/ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬೇತೂರು ಗ್ರಾಮ ಪಂಚಾಯತ್, 2) ಅರ್ಜಿ ಶುಲ್ಕ:ರೂ. 100-00 ನ್ನು ಪಾವತಿಸಿ ಅರ್ಜಿ ಪಡೆಯತಕ್ಕದ್ದು. ಅರ್ಜಿಯ ಪಡೆಯಲು ಕೊನೆಯ ದಿ: 15.02.2023 ರಂದು ಸಂಜೆ 4.30 ಗಂಟೆಗೆ. 3) ಭರ್ತಿ ಮಾಡಿದ ಟೆಂಡರ್‌ನ್ನು ಸ್ವೀಕರಿಸುವ ಕೊನೆಯ ದಿನಾಂಕ: 15.02.2023 ರಂದು ಸಂಜೆ 4.30 ಗಂಟೆಗೆ. 5) ಟೆಂಡರ್ ತೆರೆಯುವ ದಿನ ಸಮಯ ಹಾಗೂ ಸ್ಥಳ ದಿನಾಂಕ: 16.02.2023 ರಂದು ಪೂರ್ವಾಹ್ನ 11.30 ಗಂಟೆಗೆ. ಬೇತೂರು ಗ್ರಾ. ಪಂ. ಕಛೇರಿಯಲ್ಲಿ ಹಾಜರಿರುವ ಟೆಂಡರದಾರರ/ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಷರತ್ತು ಹಾಗೂ ಮತ್ತಿತರ ಮಾಹಿತಿಗಾಗಿ ಗ್ರಾ.ಪಂ. ಕಛೇಗೆ ಸಂಪರ್ಕಿಸಬಹುದು.**

ವಾಸಾಇ/ದಾವಣಗೆರೆ/905/ ಕೆಎಸ್ಎಂಸಿಎ/2021-22

**ಸಹಿ/- ಪಂಚಾಯಿತಿ ಅಭಿವೃದಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ, ಬೇತೂರು.**

## ರಾಹುಲ್ ವಿಮಾನ ಇಳಿಯಲು ಅನುಮತಿ ನಿರಾಕರಿಸಿಲ್ಲ

ವಾರಣಾಸಿ, ಫೆ. 14 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿಮಾನ ವಾರಣಾಸಿಯಲ್ಲಿ ಇಳಿಯಲು ಅನುಮತಿ ನಿರಾಕರಿಸಲಾಗಿತ್ತು ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದ್ದಾರೆ. ಈ ಆರೋಪವನ್ನು ವಿಮಾನ ನಿಲ್ದಾಣದ ಅಧಿಕಾರಿಗಳು ತಳ್ಳಿ ಹಾಕಿದ್ದಾರೆ.

ರಾಹುಲ್ ಗಾಂಧಿ ಅವರು ಕೇರಳದ ವಯನಾಡಿನಿಂದ ವಾರಣಾಸಿಗೆ ಬರಬೇಕಿತ್ತು. ಅವರ ವಿಮಾನ ಸೋಮವಾರ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿತ್ತು ಎಂದು ಕಾಂಗ್ರೆಸ್ ಹಿರಿಯ ನಾಯಕ ಅಜಯ್ ರಾಯ್ ಹೇಳಿದ್ದಾರೆ. ಆದರೆ, ಕೊನೆ ಕ್ಷಣದಲ್ಲಿ ರಾಹುಲ್ ಗಾಂಧಿ ಅವರ ವಿಮಾನ ಇಳಿಯಲು ಅನುಮತಿ ನಿರಾಕರಿಸಲಾಯಿತು. ಇದರಿಂದಾಗಿ ರಾಹುಲ್ ಗಾಂಧಿ ರಾಜಧಾನಿ ದೆಹಲಿಗೆ ತೆರಳಿದರು ಎಂದು ರಾಯ್ ಆರೋಪಿಸಿದ್ದಾರೆ. ಆದರೆ, ಆರೋಪ ತಳ್ಳಿಹಾಕಿರುವ ವಾರಣಾಸಿ ವಿಮಾನ ನಿಲ್ದಾಣದ ನಿರ್ದೇಶಕರಾದ ಆರ್ಯಮ ಸನ್ಯಾಲ್, ಇಲ್ಲಿ ವಿಮಾನ ಇಳಿಸುವ ಯೋಜನೆ ರದ್ದಾಗಿದೆ ಎಂದು ತಿಳಿಸಲಾಗಿತ್ತು ಎಂದಿದ್ದಾರೆ.

ರಾತ್ರಿ 9.16ರ ಸಮಯದಲ್ಲಿ ಎ.ಆರ್. ಏರ್‌ವೇಯ್ಸ್‌ನಿಂದ ವಿಮಾನ ಇಳಿಯುವುದು ರದ್ದಾಗಿರುವ ಬಗ್ಗೆ ಇಮೇಲ್ ಕಳಿಸಲಾಗಿತ್ತು. ವಿಮಾನ ನಿರ್ವಾಹಕರೇ ಯೋಜನೆ ರದ್ದು ಮಾಡಿದ್ದರು ಎಂದು ಸನ್ಯಾಲ್ ತಿಳಿಸಿದ್ದಾರೆ.

## ಸ್ಮಾರ್ಟ್ ಕಿಡ್ ಕರಾಟೆ ಪಟುಗಳಿಗೆ ಗೆಲುವು



ದಾವಣಗೆರೆ, ಫೆ.14 - ಚಿತ್ರದುರ್ಗದಲ್ಲಿ ಈಚೆಗೆ ಜರುಗಿದ ರಾಷ್ಟ್ರ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಇಲ್ಲಿನ ಕಾಳಿದಾಸ ನಗರದ ಸ್ಮಾರ್ಟ್ ಕಿಡ್ ಸ್ಕೂಲ್ ಕರಾಟೆ ಪಟುಗಳಾದ ವಿವನ್ ವಿ.ಬಿ.-ದ್ವಿತೀಯ, ಲಿಖಿತ್‌ರಾಜ್ ಬಿ.ಟಿ.-ದ್ವಿತೀಯ, ಶಮಿತ್ ಬಿ.ಟಿ.- ಪ್ರಥಮ, ವಿಹಾನ್ ಎಂ.ಎಸ್.- ಪ್ರಥಮ, ಹೃತ್ವಿಕ್ ಎಲ್. - ಪ್ರಥಮ ಮತ್ತು ತೃತೀಯ ಸ್ಥಾನ ಪಡೆದಿದ್ದಾರೆ.

## ಒಬ್ಬ ವ್ಯಕ್ತಿಯಿಂದ ದೇಶ ಕಟ್ಟಲಾಗದು : ಆರ್‌ಎಸ್ಸೆಸ್

ನಾಗಪುರ, ಫೆ. 14 – ಒಂದು ಸಿದ್ಧಾಂತ, ಒಬ್ಬ ವ್ಯಕ್ತಿಯಿಂದ ದೇಶವನ್ನು ಕಟ್ಟಲು ಇಲ್ಲವೇ ಕೆಡವಲು ಸಾಧ್ಯವಿಲ್ಲ. ಉತ್ತಮ ದೇಶಗಳು ಬಹು ವಿಚಾರಗಳನ್ನು ಹೊಂದಿರುತ್ತವೆ ಎಂದು ಆರ್.ಎಸ್.ಎಸ್. ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ರಾಜರತ್ನ ಪುರಸ್ಕಾರ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಶ್ವದಾದ್ಯಂತ ಉತ್ತಮ ದೇಶಗಳು ಎಲ್ಲಾ ರೀತಿಯ ವಿಚಾರಗಳನ್ನು ಹೊಂದಿರುತ್ತವೆ. ಇಲ್ಲಿ ಎಲ್ಲ ರೀತಿಯ ವ್ಯವಸ್ಥೆಗಳಿರುತ್ತವೆ. ಈ ಬಹು ವ್ಯವಸ್ಥೆಯೊಂದಿಗೆ ದೇಶಗಳು ಬೆಳೆಯುತ್ತವೆ ಎಂದು ಭಾಗವತ್ ತಿಳಿಸಿದ್ದಾರೆ.

### ಘನ ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್‌ರವರ ನ್ಯಾಯಾಲಯ ದಾವಣಗೆರೆಯವರ ಸಮ್ಮುಖದಲ್ಲಿ

ಎ.ಪಿ. ನಂ. 12/2022

**ಅರ್ಜಿದಾರರು :** ನ್ಯಾಷನಲ್ ಹೈ ವೇಸ್ ಅಥಾರಿಟಿ ಆಫ್ ಇಂಡಿಯಾ **ವಿರುದ್ಧ**

**ಪ್ರತಿವಾದಿಗಳು :** ಆರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು ಮತ್ತು ಇತರೆ 21 ಜನರು

**ಪ್ರಕಟಣೆ**

**ಸಿ.ಪಿ.ಸಿ. ಆರ್ಡರ್ 5, ರೂಲ್ 20 (1-A) ರೆಡ್ ವಿತ್ ಸೆಕ್ಷನ್ 151 ಪ್ರಕಾರ – ಮಧ್ಯಂತರ - ಅರ್ಜಿ ಆದೇಶಾನುಸಾರ ಪ್ರಕರಣದ ರೆಸ್ಪಾಂಡೆಂಟ್ಸ್ ನಂ. 20 ಮತ್ತು 21 ರವರಿಗೆ ನೋಟೀಸ್.**

ಮೇಲ್ಕಂಡ ಘನ ನ್ಯಾಯಾಲಯದ ಪ್ರಕರಣದಲ್ಲಿನ ರೆಸ್ಪಾಂಡೆಂಟ್ಸ್ ನಂ. 20 ಮತ್ತು 21 - ಶರತ್ ಬಿನ್ ಎಸ್. ರಾವ್ ಮತ್ತು ಶಶಾಂಕ್ ಎಸ್ ರಾವ್ ಬಿನ್ ಶಶಿಧರ ರಾವ್ ಟಿ.ಎನ್. ಇಬ್ಬರೂ ಜಗಳೂರು ನಿವಾಸಿಗಳು, ಇವರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ;- ಸದರಿ ಪ್ರಕರಣದಲ್ಲಿ – ಸದರಿ ರೆಸ್ಪಾಂಡೆಂಟ್ಸ್ ರವರಿಂದ ಜಗಳೂರು ತಾಲ್ಲೂಕ್, ಬಂಗಾರಕ್ಕನ ಗುಡ್ಡ ಗ್ರಾಮದ ಸರ್ವೆ ನಂ. 19/ಪಿ 2 ರಲ್ಲಿ 1515 ಚದರ ಮೀಟರ್ಸ್ ಭೂಮಿಯನ್ನು ಪ್ರಕರಣದ ಅರ್ಜಿದಾರರು - ಕೇಂದ್ರ ಸರ್ಕಾರದ ಪರವಾಗಿ - ನ್ಯಾಷನಲ್ ಹೈ ವೇಸ್ ಆಕ್ಟ್ 1956 ಸೆಕ್ಷನ್ 3(ಡಿ) ಪ್ರಕಾರ ಭೂ-ಸ್ವಾಧೀನ ಪಡಿಸಿಕೊಂಡಿದ್ದು - ನಂತರ, ಸದರಿ ರೆಸ್ಪಾಂಡೆಂಟ್ಸ್ ರವರುಗಳು, ಸದರಿ ಭೂ-ಸ್ವಾಧೀನದ ಬಗ್ಗೆ ಹೆಚ್ಚಿನ ಪರಿಹಾರ ಕೋರಿ ಆರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು, ದಾವಣಗೆರೆ ಇವರಲ್ಲಿ ಕೇಸ್ ನಂ. ಎಲ್. ಎ. ಕ್ಯೂ. ಎ. ಆರ್ ಬಿ. 134/19-20 ರ ಪ್ರಕಾರ ಅರ್ಜಿ ಸಲ್ಲಿಸಿದ್ದು, ಆ ಅರ್ಜಿಯ ಮೇಲೆ ಸದರಿ ಆರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು, ದಾವಣಗೆರೆ ಇವರು ತಾ. 23-7-2021 ರಂದು ಹೊರಡಿಸಿದ ಆದೇಶ / ಅವಾರ್ಡ್ ವಿರುದ್ಧ, ಸದರಿ ಅರ್ಜಿದಾರರು, ನ್ಯಾಯಾಲಯದ ಸಮ್ಮುಖದಲ್ಲಿ ಅಪೀಲ್ / ಪ್ರಕರಣವನ್ನು ಸಲ್ಲಿಸಿದ್ದು ಸದರಿ ತಾವುಗಳೂ ಸಹ ಪ್ರಕರಣದಲ್ಲಿ ಪಾಲ್ಗೊಳ್ಳುವಂತೆ - ಸದರಿ ಘನ ನ್ಯಾಯಲಯವು - ಈ ಮೂಲಕ ತಮಗೆ ನಿರ್ದೇಶಿಸುವುದೇನೆಂದರೆ, ತಾರೀಖು 27-3-2023 ರಂದು ಬೆಳಿಗ್ಗೆ 11-00 ಗಂಟೆಗೆ – ತಾವೇ ಖುದ್ದಾಗಲೀ ಅಥವಾ ತಮ್ಮ ಪರ ವಕೀಲರಾಗಲಿ ಹಾಜರಾಗಿ, ಸದರಿ ಪ್ರಕರಣದ ಬಗ್ಗೆ ತಮ್ಮ ತಕರಾರು / ಅಹವಾಲು ಮತ್ತು ಸಾಕ್ಷಿ ಪುರಾವೆಗಳನ್ನು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ, ಸದರಿ ಘನ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ತಮ್ಮನ್ನು ಏಕಪಕ್ಷೀಯ ಮಾಡಿ ಪ್ರಕರಣವನ್ನು ನಿಮ್ಮ ಗೈರು ಹಾಜರಿಯಲ್ಲಿ ಇತ್ಯರ್ಥಗೊಳಿಸಲಾಗುವುದು ತಿಳಿಯಿರಿ.

ಘನ ನ್ಯಾಯಾಲಯದ ಆದೇಶದ ಮೇರೆಗೆ ಈ ಕೆಳಗೆ ನನ್ನ ಸಹಿಯೊಂದಿಗೆ ನ್ಯಾಯಾಲಯದ ಮೊಹರೆನಿಸಿ, ದಿನಾಂಕ 14-2-2023 ರಂದು ನೀಡಿದ ನೋಟಿಸ್.

**ಎಸ್. ಸಿದ್ದವೀರಪ್ಪ,** ಬಿ. ಕಾಂ., ಎಲ್‌ಎಲ್, ಬಿ.
ಅರ್ಜಿದಾರ ಪರ ವಕೀಲರು,
ಪಿ.ಜೆ. ಬಡಾವಣೆ, ದಾವಣಗೆರೆ.
13-2-2023

**ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ**
**ಮುಖ್ಯ ಆಡಳಿತಾಧಿಕಾರಿಗಳು**
**ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್‌ರವರ ನ್ಯಾಯಾಲಯ, ದಾವಣಗೆರೆ.**

### ಘನ ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್‌ರವರ ನ್ಯಾಯಾಲಯ ದಾವಣಗೆರೆಯವರ ಸಮ್ಮುಖದಲ್ಲಿ

ಎ.ಎಸ್. ನಂ. 2/2020

**ಅರ್ಜಿದಾರರು :** ನ್ಯಾಷನಲ್ ಹೈ ವೇಸ್ ಅಥಾರಿಟಿ ಆಫ್ ಇಂಡಿಯಾ **ವಿರುದ್ಧ**

**ಪ್ರತಿವಾದಿಗಳು :** ಆರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು ಮತ್ತು ಇತರೆಯವರು

**ಪ್ರಕಟಣೆ**

**ಸಿ.ಪಿ.ಸಿ. ಆರ್ಡರ್ 5, ರೂಲ್ 20 (1-A) ರೆಡ್ ವಿತ್ ಸೆಕ್ಷನ್ 151 ಪ್ರಕಾರ – ಮಧ್ಯಂತರ - ಅರ್ಜಿ ಆದೇಶಾನುಸಾರ ಪ್ರಕರಣದ ರೆಸ್ಪಾಂಡೆಂಟ್ಸ್ ನಂ. 5 (ಎ) ಇಂದ 5 (ಸಿ) ರವರುಗಳಿಗೆ ನೋಟೀಸ್.**

ಮೇಲ್ಕಂಡ ಘನ ನ್ಯಾಯಾಲಯದ ಪ್ರಕರಣದಲ್ಲಿನ ರೆಸ್ಪಾಂಡೆಂಟ್ಸ್ ನಂ. 5 (ಎ) ಇಂದ 5 (ಸಿ) ರವರಾದ - ಶ್ರೀಮತಿ ಶಶಿಕಲಾ ಪಿ.ವಿ. ಬಿನ್ ಲೇಟ್ ಗೌರಮ್ಮ ಸಿ.ವೈ, ಶ್ರೀಮತಿ ನಂದಿನಿ ಪಿ.ವಿ. ಬಿನ್ ಲೇಟ್ ಗೌರಮ್ಮ ಸಿ.ವೈ. ಮತ್ತು ಶ್ರೀಮತಿ ನಾಗಮಣಿ ಪಿ.ವಿ. ಬಿನ್ ಲೇಟ್ ಗೌರಮ್ಮ ಸಿ. ವೈ., ಎಲ್ಲರೂ ಕಲ್ಲೇದೇವರಪುರ ಗ್ರಾಮ, ಜಗಳೂರು ತಾಲ್ಲೂಕ್ ವಾಸಿಗಳು, ಇವರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ;- ಸದರಿ ಪ್ರಕರಣದಲ್ಲಿ – ಸದರಿ ರೆಸ್ಪಾಂಡೆಂಟ್ಸ್ ರವರ - ತಾಯಿಯವರಾದ ಲೇಟ್ ಶ್ರೀಮತಿ ಗೌರಮ್ಮ ಸಿ.ವೈ. ರವರಿಂದ - ಜಗಳೂರು ತಾಲ್ಲೂಕ್, ಕಲ್ಲೇದೇವರಪುರ ಗ್ರಾಮದ ಸರ್ವೆ ನಂ. 2/1ಎ3 ರಲ್ಲಿ 707 ಚದರ ಮೀಟರ್ಸ್ ಭೂಮಿಯನ್ನು ಪ್ರಕರಣದ ಅರ್ಜಿದಾರರು - ಕೇಂದ್ರ ಸರ್ಕಾರದ ಪರವಾಗಿ - ನ್ಯಾಷನಲ್ ಹೈ ವೇಸ್ ಆಕ್ಟ್ 1956 ಸೆಕ್ಷನ್ 3(ಡಿ) ಪ್ರಕಾರ ಭೂ ಸ್ವಾಧೀನ ಪಡಿಸಿಕೊಂಡಿದ್ದು - ನಂತರ, ಸದರಿ ರೆಸ್ಪಾಂಡೆಂಟ್ಸ್ ರವರುಗಳ ತಾಯಿವರರಾದ -ಶ್ರೀಮತಿ ಗೌರಮ್ಮ ಸಿ.ವೈ. ರವರು, ಸದರಿ ಭೂ ಸ್ವಾಧೀನದ ಬಗ್ಗೆ ಹೆಚ್ಚಿನ ಪರಿಹಾರ ಕೋರಿ - ಆರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು, ದಾವಣಗೆರೆ ಇವರಲ್ಲಿ ಕೇಸ್ ನಂ. ಎಲ್. ಎ. ಕ್ಯೂ. ಎ. ಆರ್ ಬಿ. ಜಗಳೂರು 35/17-18ರ ಪ್ರಕಾರ ಅರ್ಜಿ ಸಲ್ಲಿಸಿದ್ದು, ಅರ್ಜಿಯ ಮೇಲೆ ಸದರಿ ಆರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು, ದಾವಣಗೆರೆ ಇವರು ತಾ. 20-1-2020 ರಂದು ಹೊರಡಿಸಿದ ಆದೇಶ / ಅವಾರ್ಡ್ ವಿರುದ್ಧ, ಸದರಿ ಅರ್ಜಿದಾರರು, ಸದರಿ ಘನ ನ್ಯಾಯಾಲಯದ ಸಮ್ಮುಖದಲ್ಲಿ ಅಪೀಲ್ / ಪ್ರಕರಣವನ್ನು ಸಲ್ಲಿಸಿದ್ದು - ಸದರಿ ತಾವುಗಳೂ ಸಹ ಪ್ರಕರಣದಲ್ಲಿ ಪಾಲ್ಗೊಳ್ಳುವಂತೆ - ಸದರಿ ಘನ ನ್ಯಾಯಲಯವು - ಈ ಮೂಲಕ ತಮಗೆ ನಿರ್ದೇಶಿಸುವುದೇನೆಂದರೆ, ತಾರೀಖು 27-3-2023 ರಂದು ಬೆಳಿಗ್ಗೆ 11-00 ಗಂಟೆಗೆ - ತಾವೇ ಖುದ್ದಾಗಲೀ ಅಥವಾ ತಮ್ಮಪರ ವಕೀಲರಾಗಲೀ ಹಾಜರಾಗಿ, ಸದರಿ ಪ್ರಕರಣದ ಬಗ್ಗೆ ತಮ್ಮ ತಕರಾರು/ಅಹವಾಲು ಮತ್ತು ಸಾಕ್ಷಿ ಪುರಾವೆಗಳನ್ನು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ, ಸದರಿ ಘನ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ತಮ್ಮನ್ನು ಏಕಪಕ್ಷೀಯ ಮಾಡಿ ಪ್ರಕರಣವನ್ನು ನಿಮ್ಮ ಗೈರು ಹಾಜರಿಯಲ್ಲಿ ಇತ್ಯರ್ಥಗೊಳಿಸಲಾಗುವುದು ತಿಳಿಯಿರಿ.

ಘನ ನ್ಯಾಯಾಲಯದ ಆದೇಶದ ಮೇರೆಗೆ ಈ ಕೆಳಗೆ ನನ್ನ ಸಹಿಯೊಂದಿಗೆ ನ್ಯಾಯಾಲಯದ ಮೊಹರೆನಿಸಿ, ದಿನಾಂಕ 14-2-2023 ರಂದು ನೀಡಿದ ನೋಟಿಸ್.

**ಎಸ್. ಸಿದ್ದವೀರಪ್ಪ,** ಬಿ. ಕಾಂ., ಎಲ್‌ಎಲ್, ಬಿ.
ಅರ್ಜಿದಾರ ಪರ ವಕೀಲರು,
ಪಿ.ಜೆ. ಬಡಾವಣೆ, ದಾವಣಗೆರೆ.
13-2-2023

**ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ**
**ಮುಖ್ಯ ಆಡಳಿತಾಧಿಕಾರಿಗಳು**
**ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್‌ರವರ ನ್ಯಾಯಾಲಯ, ದಾವಣಗೆರೆ.**

# 470 ವಿಮಾನಗಳ ಖರೀದಿಗೆ ಏರ್ ಇಂಡಿಯಾ ಘೋಷಣೆ

**6.40 ಲಕ್ಷ ಕೋಟಿ ರೂ. ಮೌಲ್ಯದ ಖರೀದಿ**

ನವದೆಹಲಿ, ಫೆ. 14 – ಟಾಟಾ ಸಮೂಹ ಮಾಲೀಕತ್ವದ ಏರ್ ಇಂಡಿಯಾ 470 ವಿಮಾನಗಳನ್ನು ಖರೀದಿಸುವುದಾಗಿ ಘೋಷಿಸಿದೆ. ಏರ್‌ಬಸ್ ಹಾಗೂ ಬೋಯಿಂಗ್‌ಗಳಿಂದ 80 ಶತಕೋಟಿ ಡಾಲರ್ (6.40 ಲಕ್ಷ ಕೋಟಿ ರೂ.) ಮೌಲ್ಯದ ವಿಮಾನ ಖರೀದಿಸಲು ಕಂಪನಿ ನಿರ್ಧರಿಸಿದೆ.

ಯುರೋಪಿನ ಪ್ರಮುಖ ವಿಮಾನ ಉತ್ಪಾದನಾ ಕಂಪನಿಯಾದ ಏರ್‌ಬಸ್‌ನಿಂದ 250 ಹಾಗೂ ಅಮೆರಿಕದ ಬೋಯಿಂಗ್ ಕಂಪನಿಯಿಂದ 220 ವಿಮಾನಗಳನ್ನು ಖರೀದಿಸಲು ಏರ್ ಇಂಡಿಯಾ ಮುಂದಾಗಿದೆ.

ಕಳೆದ ಜನವರಿ 2022ರಂದು ಸರ್ಕಾರದಿಂದ ಏರ್ ಇಂಡಿಯಾವನ್ನು ಟಾಟಾ ಸಮೂಹ ಖರೀದಿಸಿತ್ತು. 17 ವರ್ಷಗಳಲ್ಲಿ ಮೊದಲ ಬಾರಿಗೆ ಏರ್ ಇಂಡಿಯಾ ವಿಮಾನವೊಂದನ್ನು ಖರೀದಿಸುತ್ತಿದೆ. ಈ ವರ್ಷದ ಅಂತ್ಯಕ್ಕೆ ಕಂಪನಿಗೆ ಮೊದಲ ಎ350 ವಿಮಾನ ಲಭ್ಯವಾಗಲಿದೆ.

ಈ ಒಪ್ಪಂದದ ಒಟ್ಟು ಮೌಲ್ಯ 80 ಶತಕೋಟಿ ಡಾಲರ್. ಭಾರತದ ರೂಪಾಯಿಯಲ್ಲಿ 6.40 ಲಕ್ಷ ಕೋಟಿ ರೂ. ಎಂದು ಮೂಲಗಳು ತಿಳಿಸಿವೆ.

2023ರ ಕೊನೆಯ ಭಾಗದಲ್ಲಿ ವಿಮಾನಗಳು ಲಭ್ಯವಾಗಲಿವೆ. 2025ರ ನಂತರದಲ್ಲಿ ಹೆಚ್ಚು ವಿಮಾನಗಳು ಸಿಗಲಿವೆ ಎಂದು ಏರ್ ಇಂಡಿಯಾ ತಿಳಿಸಿದೆ.

ಇದು ಭಾರತೀಯ ವಿಮಾನಯಾನ ಸಂಸ್ಥೆಯೊಂದರಿಂದ ಪಡೆಯಲಾಗುತ್ತಿರುವ ಅತಿ ಹೆಚ್ಚಿನ ಸಂಖ್ಯೆಯ ವಿಮಾನಗಳಾಗಿವೆ. ಇದು ವಿಶ್ವದಾದ್ಯಂತದ ಅತಿ ದೊಡ್ಡ ಖರೀದಿಗಳಲ್ಲಿ ಒಂದಾಗಿದೆ. ಇದು ಭಾರತದಲ್ಲಿರುವ ಅಸಾಧಾರಣ ಪ್ರಮಾಣ ಹಾಗೂ ಬೆಳವಣಿಗೆ ಅವಕಾಶದ ಸೂಚಕವಾಗಿದೆ ಎಂದು ಏರ್ ಇಂಡಿಯಾ ಸಿಇಒ ಕ್ಯಾಂಪ್‌ಬೆಲ್ ವಿಲ್ಸನ್ ತಿಳಿಸಿದ್ದಾರೆ.

ಏರ್ ಇಂಡಿಯಾ ಈ ಹಿಂದೆ 2005ರಲ್ಲಿ 111 ವಿಮಾನಗಳನ್ನು ಖರೀದಿಸಲು ಆದೇಶ ಹೊರಡಿಸಿತ್ತು. ನಂತರ ಯಾವುದೇ ವಿಮಾನ ಖರೀದಿಸಿರಲಿಲ್ಲ.

## ಬೋಯಿಂಗ್‌ನಿಂದ 220 ವಿಮಾನ ಖರೀದಿಸಲಿರುವ ಏರ್ ಇಂಡಿಯಾ



ನವದೆಹಲಿ, ಫೆ. 14 – ಬೋಯಿಂಗ್ ಕಂಪನಿಯಿಂದ 220 ವಿಮಾನಗಳನ್ನು 34 ಶತಕೋಟಿ ಡಾಲರ್ ವೆಚ್ಚದಲ್ಲಿ ಖರೀದಿಸಲು ಏರ್ ಇಂಡಿಯಾ ನಿರ್ಧರಿಸಿದೆ. ಇನ್ನೂ 70 ವಿಮಾನಗಳ ಖರೀದಿ ಆಯ್ಕೆಯನ್ನೂ ಹೊಂದಿದ್ದು, ಒಟ್ಟು ವಹಿವಾಟು 45.9 ಶತಕೋಟಿ ಡಾಲರ್‌ಗಳಿಗೆ ತಲುಪಲಿದೆ.

ಬೋಯಿಂಗ್ ಹಾಗೂ ಏರ್ ಇಂಡಿಯಾಗಳು ಈ ಬಗ್ಗೆ ಒಪ್ಪಂದ ಮಾಡಿಕೊಂಡಿವೆ. ಈ ಒಪ್ಪಂದ ಐತಿಹಾಸಿಕ ಎಂದು ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಹೇಳಿದ್ದಾರೆ.

ಏರ್ ಇಂಡಿಯಾ ಮಾಡಲಿರುವ ಖರೀದಿ ಡಾಲರ್ ಮೌಲ್ಯದಲ್ಲಿ ಬೋಯಿಂಗ್‌ಗೆ ಮೂರನೇ ಅತಿ ದೊಡ್ಡ ವಹಿವಾಟಾಗಿದೆ. ವಿಮಾನಗಳ ಸಂಖ್ಯೆಯಲ್ಲಿ ಎರಡನೆಯದ್ದಾಗಿದೆ.

## 200 ಹೆಲಿಕಾಪ್ಟರ್ ಖರೀದಿಗೆ ಸೈನ್ಯದ ಯೋಜನೆ

ಬೆಂಗಳೂರು, ಫೆ. 14 – ಸೈನ್ಯವು 95 ಹಗುರ ಸಮರ ಹೆಲಿಕಾಪ್ಟರ್ ಹಾಗೂ 110 ಹಗುರ ಬಳಕೆಯ ಹೆಲಿಕಾಪ್ಟರ್ ಖರೀದಿಸಲು ಯೋಜಿಸಲಾಗಿದೆ ಎಂದು ಭೂಸೇನಾ ಮುಖ್ಯಸ್ಥ ಮನೋಜ್ ಪಾಂಡೆ ತಿಳಿಸಿದ್ದಾರೆ. ದೇಶೀಯವಾಗಿ ನಿರ್ಮಿಸಲಾಗಿರುವ ಹಗುರ ಹೆಲಿಕಾಪ್ಟರ್‌ಗಳನ್ನು ಪಡೆಯಲು ಸೈನ್ಯ ಯೋಜಿಸುತ್ತಿದೆ ಎಂದವರು ತಿಳಿಸಿದ್ದಾರೆ. ಹಳೆಯದಾಗುತ್ತಿರುವ ಚೇತಾ ಹಾಗೂ ಚೇತಕ್ ಹೆಲಿಕಾಪ್ಟರ್‌ಗಳ ಜಾಗಕ್ಕೆ ಹೊಸ ಹೆಲಿಕಾಪ್ಟರ್‌ಗಳನ್ನು ಪಡೆಯಲು ಉದ್ದೇಶಿಸಲಾಗಿದೆ.

## ಯೋಗ ಗುರು ಪರಶುರಾಮ್‌ಗೆ ಪ್ರಶಸ್ತಿ



ದಾವಣಗೆರೆ, ಫೆ.14- ಅಂತರ ರಾಷ್ಟ್ರೀಯ ಯೋಗ ಪಟು ಎನ್. ಪರಶುರಾಮ ಅವರಿಗೆ 'ಮರೆಯದ ಮಾಣಿಕ್ಯ ಪ್ರಶಸ್ತಿ' ನೀಡಲಾಗಿದೆ. ಬೆಂಗಳೂರಿನ ಯಲಹಂಕದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಇತ್ತೀಚಿಗೆ ಮೈ ಸ್ಮೈಲ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಡಾ. ವಿಷ್ಣುವರ್ಧನ್ ಸವಿನೆನಪಿನ ಅಂಗವಾಗಿ ಆಯೋಜಿಸಿದ್ದ ನನ್ನ ನಗು ಕಾರ್ಯಕ್ರಮದಲ್ಲಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಕಾರ್ಯಕ್ರಮ ಆಯೋಜಿಸಿದ್ದ ಸಂಸ್ಥಾಪಕ ಅಧ್ಯಕ್ಷ ವಿ.ರಘು, ಯಲಹಂಕ ಶಾಸಕ ವಿಶ್ವನಾಥ್, ಚಲನಚಿತ್ರ ಹಿರಿಯ ಕಲಾವಿದರಾದ ಸುಮಿತ್ರಾ, ತಾರಾ, ಜಗ್ಗೇಶ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

## ಪ್ರೇಮಿಗಳ ಮನಸ್ಸಿನ ತೇರು !

ಸುಪ್ತ ಪ್ರೇಮ ಮನಸು ಬಹಿರಂಗ ಸಲ್ಲದು,!!
ಪ್ರೇಮಿಗಳ ದಿನಾಚರಣೆ ಎಷ್ಟು ಔಚಿತ್ಯ!?

ತೆರೆದಿಡುವ ಬಯಲಿನಂತೆ
ಬಯಲಾಗ ಬಾರದು ಪ್ರೇಮ.!

ಇದು ಎರಡು ದೇಹದೊಳಗಿನ
ಕಾಮ ಮೀರಿದ ಉನ್ಮಾದ!!

ಕಾಮ ಪ್ರದರ್ಶನ ಹೆಸರಲಿ ವಿಕೃತಿ ಪ್ರದರ್ಶನ ಸಲ್ಲದು.!!
ಪ್ರೇಮಿಗಳ ದಿನ ಪ್ರೇಮಿಗಳ ಗುರುತಿಸುವಿಕೆ ಸಂಚಾಗಿದೆ.!?

ಹೇಳುವ ಪ್ರದರ್ಶಿಸುವ ಕ್ರೀಡೆ ಅಲ್ಲ.!!
ಪ್ರೇಮಿಗಳ ಹುಡುಕಾಟದವನಿಗೆ ಇದು ಅನ್ವೇಷಣೆ?

ಬೇಕಿಲ್ಲ ಪ್ರೇಮ,ಮನಸಿನ
ಮಾರಾಟ ದಿನಾಚರಣೆ ನೆಪದಲಿ

ಇದು ನಮ್ಮ ಭೂಮಿ ನಾಡು
ಸಂಸ್ಕೃತಿಗೆ ತರವಲ್ಲ ಕಾಣಿರೋ!!

ವಿಕೃತ ಮೆರೆಸದೆ ಸಂಸ್ಕೃತಿ ಉಳಿಯಲು ಈ ದಿನ ದಿಕ್ಕರಿಸಿ!

ಸುಪ್ತ ಪ್ರೀತಿ ಪ್ರೇಮ ತುಂಬಿದ್ದರೆ
ಅದುವೇ ನಂದ ಗೋಕುಲ!!

ಮನಸಿನ ದೀಪ ಮನಸಿನೊಳಗೆ
ಬೆಳಗಿ, ಎರಡು ಜೀವಗಳಲಿರಲಿ..

**- ರೇವಣ್ಣ ಬಳ್ಳಾರಿ, ನ್ಯಾಯವಾದಿ, ದಾವಣಗೆರೆ..**

# ಕನ್ನಡ ಕಲಿಕಾ ಚೇತರಿಕೆ ಉಪಕ್ರಮದ ಯಶೋಗಾಥೆ..!





ಕೋವಿಡ್-19 ಕಾರಣದಿಂದ, ಮಕ್ಕಳ ಕಲಿಕಾ ಪ್ರಗತಿ ಎರಡು ವರ್ಷಗಳ ಕಾಲ ಕುಂಠಿತವಾದ ಹಿನ್ನೆಲೆಯಲ್ಲಿ ಸರ್ಕಾರವು 1ರಿಂದ 9 ನೇ ತರಗತಿವರೆಗಿನ ಮಕ್ಕಳ ಬುನಾದಿ ಕಲಿಕಾ ಸಾಮರ್ಥ್ಯ ಹೆಚ್ಚಿಸಲು ಕಲಿಕಾ ಚೇತರಿಕೆ ಉಪಕ್ರಮದ ಶೈಕ್ಷಣಿಕ ಯೋಜನೆಯನ್ನು ಜಾರಿಗೆ ತಂದು ಅನುಷ್ಠಾನಗೊಳಿಸಿತು.

ಈ ಹಿನ್ನೆಲೆಯಲ್ಲಿ ಶಿಕ್ಷಕರು ಸುಗಮಕಾರರಾಗಿ ಪಾತ್ರವಹಿಸಿ, ಮಕ್ಕಳಿಗೆ ಕಲಿಕಾ ಫಲ ಗಳ ಆಧಾರಿತ ಓದು, ಬರಹಗಳನ್ನು ವೈವಿಧ್ಯ ಮಯ ಚಟುವಟಿಕೆಗಳ ಮೂಲಕ ಕಲಿಸು ವಂತಹ ಕಲಿಕಾ ಪ್ರಕ್ರಿಯೆಗಳು ಶಾಲೆಗಳಲ್ಲಿ ಮೇ ತಿಂಗಳಿನಿಂದ ಇಲ್ಲಿಯವರೆಗೂ ಯಶಸ್ವಿಯಾಗಿ ನಡೆಯುತ್ತಾ ಬಂದಿವೆ.

ಇದಕ್ಕೆ ಸಂಬಂಧಿಸಿದಂತೆ ಕಲಿಕಾ ಚೇತರಿಕೆ ಉಪಕ್ರಮ ಕುರಿತಾದ ಸಮಾಲೋ ಚನಾ ಸಭೆಗಳನ್ನು ನಮ್ಮ ಜಿಲ್ಲೆಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯು ತಿಂಗಳಿಗೊಮ್ಮೆ ಪರಿಣಾಮಕಾರಿಯಾಗಿ ನಡೆಸುತ್ತಾ ಬಂದು, ಕಲಿಕಾ ಫಲ ಆಧಾರಿತ ಮಕ್ಕಳಿಗೆ ವೈವಿಧ್ಯಮಯ ಚಟುವಟಿಕೆಗಳನ್ನು ಕಲಿಸುವಾಗ ಶಿಕ್ಷಕರಿಗೆ ಎದುರಾಗುವ ಕಲಿಕಾ ಸಮಸ್ಯೆಗಳನ್ನು ಹೇಗೆ ಪರಿಹರಿಸ ಬೇಕು.? ಹೇಗೆ ಮಕ್ಕಳಲ್ಲಿ ಕಲಿಕಾ ಪ್ರಗತಿ ಯುಂಟು ಮಾಡಬೇಕು..? ಎಂಬುದನ್ನು ಶಿಕ್ಷಕರೇ ಪರಸ್ಪರ ಚರ್ಚಿಸಿ, ಪರಿಹಾರ ಪಡೆಯುವಂತೆ ಇಲಾಖೆ ಮಾಡಿತು.

ಇಲಾಖೆಯ ಹಾಗೂ ಶಿಕ್ಷಕರ ಸಾಕಷ್ಟು ಪರಿಶ್ರಮ, ಪ್ರಯತ್ನಗಳ ಫಲಶೃತಿಯಾಗಿ ಮೂಡಿಬಂದುದು ಕಲಿಕಾ ಚೇತರಿಕೆಯ ಯಶೋಗಾಥೆ!

ಕಳೆದ 9ರಂದು ಶುಕ್ರವಾರ ದಾವಣಗೆರೆ ತಾಲ್ಲೂಕಿನ ಹೂವಿನಮಡು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಭಾಷಾ ಶಿಕ್ಷಕಿಯಾದ ನಾನು, ಕಲಿಕಾ ಚೇತರಿಕೆ ಈ ಯಶೋಗಾಥೆ ಸಾರುವ ಮಕ್ಕಳ ಕಲಿಕಾ ಚಟುವಟಿಕೆಗಳ ದಾಖಲೆ-ಕೃತಿ ಸಂಪುಟಗಳನ್ನು 8 ಮತ್ತು 9 ನೇ ತರಗತಿಗಳ ಕನ್ನಡ ಭಾಷಾ ಬೋಧನೆಯ ಅವಧಿಗಳಲ್ಲಿ ಪ್ರದರ್ಶನ ಮಾಡಿಸಲಾಯಿತು.

ಮಕ್ಕಳಲ್ಲಿರುವ ವೈವಿಧ್ಯಮಯ ಕಲಿಕಾ ಕೌಶಲ್ಯಗಳಲ್ಲಿ ಕೆಲವನ್ನು ಪುನರಾವರ್ತನೆಯಂತೆ ಅಭಿವ್ಯಕ್ತಿ ಮಾಡಿಸಿದೆವು.ಕಲಿತದ್ದನ್ನು ಮರೆತಿದ್ದ ಮಕ್ಕಳು ಮತ್ತೆ ಸ್ಮರಿಸಿಕೊಂಡು ಹೇಳಲು ಈ ಪ್ರದರ್ಶನ ತುಂಬಾ ಸಹಾಯಕವಾಯಿತು. ಚುಟುಕು ಕವಿತೆ ಹೇಳುವ, ಅನುಕರಣೆ ಮಾಡುವ, ಸಂಭಾಷಿಸುವ, ಅನಿಸಿಕೆ ಹೇಳುವ, ಬರೆಯುವ, ನಾಟಕ ಅಭಿನಯ ಮಾಡುವ, ನೃತ್ಯ ಮಾಡುವ ಹೀಗೆ ತಮಗಿಷ್ಟದ ನಾನಾ ಪ್ರಕಾರಗಳಲ್ಲಿ ವರ್ಷದಿಂದ ಕಲಿತ ಕಲಿಕೆಗಳಲ್ಲಿ ಕೆಲವು ಕಲಿಕಾ ಕಲೆಗಳನ್ನು ಪ್ರದರ್ಶಿಸಿ, ಆನಂದಿಸಿದರು.

ಶಿಕ್ಷಕರ ಪ್ರಾಮಾಣಿಕ ಶ್ರಮ ಸಾರ್ಥಕವಾಗಿದೆ. ಇದು ಮುಂಬರುವ ವರ್ಷಗಳಲ್ಲಿ ಸಮಾಜದ ಅನೇಕ ಪಿಡುಗುಗಳನ್ನು ತೊಡೆದು ಹಾಕಲು; ಶಾಲಾ ಕೊಠಡಿಗಳೇ ಶಾಂತಿಯುತ, ಪ್ರಭಾವಯುತ ಶೈಕ್ಷಣಿಕ ಕ್ರಾಂತಿಯ ಆಲಯಗಳಂತಾಗಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಮಹತ್ತರ ಪಾತ್ರವಹಿಸುತ್ತದೆ ಎಂದರೆ ಅತಿಶಯೋಕ್ತಿ ಖಂಡಿತಾ ಅಲ್ಲ.

ರಾಷ್ಟ್ರೀಯ ಶೈಕ್ಷಣಿಕ ಯೋಜನೆಯ ಹಿಂದೆ ಇರುವ ಅಂತಿಮ ಗುರಿ ಆದರೂ ಬಲಿಷ್ಠ ರಾಷ್ಟ್ರದ ನಿರ್ಮಾಣವೇ. ದೇಶ ಪೋಷಣೆಯ ಸಕಲ ಶೈಕ್ಷಣಿಕ ನೀತಿಗಳು, ಆಶಯಗಳು - ಲಕ್ಷಾಂತರ ಶಿಕ್ಷಕರ ಮತ್ತಷ್ಟು ಮತ್ತಷ್ಟೂ ಸೇವಾ ಶ್ರದ್ಧಾ ಸಮರ್ಪಣೆಯ ಮನೋಭಾವಗಳಿಂದ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲಿ. ಭಾರತ ಮಾತೆ ಸದಾ ಕಾಲ ಸಕಲ ಸಂಪದದಿಂದ ಕಂಗೊಳಿಸಲಿ ಎಂದು ನಾನು ಭಾವಿಸುವೆ.

**-ಎ. ಸಿ. ಶಶಿಕಲಾ ಶಂಕರಮೂರ್ತಿ,**
ಕನ್ನಡ ಭಾಷಾ ಶಿಕ್ಷಕಿ, ದಾವಣಗೆರೆ.

## ಎಸ್.ಎಲ್.ಎನ್ ಕಾನ್ವೆಂಟ್ ವಾರ್ಷಿಕೋತ್ಸವ




ದಾವಣಗೆರೆ, ಫೆ.14- ನಗರದ ಎಸ್.ಎಲ್.ಎನ್ ಕಾನ್ವೆಂಟ್ ಶಾಲೆಯ 24ನೇ ವಾರ್ಷಿಕೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವು ಶ್ರೀ ಚನ್ನಗಿರಿ ವಿರುಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ಜರುಗಿತು. ಅತಿಥಿಗಳಾಗಿ ಕಲಾನಿಕೇತನ ಕಾಲೇಜ್ ಆಫ್ ಫ್ಯಾಷನ್ ಡಿಸೈನಿಂಗ್ ಆಡಳಿತಾಧಿಕಾರಿ ಶ್ರೀಮತಿ ಅಶ್ವಿನಿ ಕಾಟ್ವೆ ರಾಯಭಾಗಿ, ಸಂಯುಕ್ತ ಪದವಿ ಪೂರ್ವ ಕಾಲೇಜ್ ಕನ್ನಡ ಉಪನ್ಯಾಸಕಿ ಶ್ರೀಮತಿ ಈ. ಉಷಾ ಆಗಮಿಸಿದ್ದರು. ಶಾಲೆಯ ಮುಖ್ಯಸ್ಥೆ ಸುಜಾತ ನಾಗೇಶ್ ಅಧ್ಯಕ್ಷತೆ ವಹಿಸಿದ್ದರು.

ಶಾಲೆಯ ಪುಟ್ಟ ಮಕ್ಕಳು ವಿವಿಧ ವೇಷ ಭೂಷಣ ಧರಿಸಿ ಗಮನ ಸೆಳೆದರು. ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಗೆದ್ದರು. ಕಳೆದ ಶೈಕ್ಷಣಿಕ ವರ್ಷದಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಾದ ಸಾನ್ವಿ ಬಂಡಿ, ರಕ್ಷಾ, ಪ್ರೇಕ್ಷ ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು .

ಪ್ರೀ-ನರ್ಸರಿನಲ್ಲಿ ಶಾನ್ವಿತ್ ಪ್ರಥಮ, ಅಭಿನವ ದ್ವಿತೀಯ, ಗ್ರೀಷ್ಮ ತೃತೀಯ ಬಹುಮಾನ ಪಡೆದರು. ಎಲ್.ಕೆ. ಜಿ, ಯಲ್ಲಿ ಶಿವಾನಿ ಪ್ರಥಮ, ಗಗನ ದ್ವಿತೀಯ, ಶಾನ್ವಿ ಕೆ.ಎಂ. ತೃತೀಯ. ಯು. ಕೆ. ಜಿಯಲ್ಲಿ ಗಹನ್ ಪ್ರಥಮ, ಆಯುಷಿ ದ್ವಿತೀಯ, ಹರಿಚರಣ ತೃತೀಯ ಬಹುಮಾನ ಪಡೆದರು. ನಾಗೇಶ್ ಸ್ವಾಗತಿಸಿದರು, ವಿಜಯ ವೀರೇಂದ್ರ ನಿರೂಪಿಸಿದರು.

## ಚಳ್ಳಕೆರೆ : ಕುಷ್ಠರೋಗ ಜಾಗೃತಿ ಅಭಿಯಾನ



ಚಳ್ಳಕೆರೆ, ಫೆ. 14- ಇಲ್ಲಿನ ಮೀರಸಾಬಿಹಳ್ಳಿ ಆರೋಗ್ಯ ಕೇಂದ್ರ ಮತ್ತು ಪಿಡಪನಕುಂಟೆ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇವರ ಸಂಯುಕ್ತಾಶ್ರಯದಲ್ಲಿ ಸ್ಪರ್ಶ್ ಕುಷ್ಠರೋಗ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಕುರಿತು ಆರೋಗ್ಯ ನಿರೀಕ್ಷಣಾಧಿಕಾರಿ ಸಿ.ಎನ್. ನವೀನ್‌ಕುಮಾರ್ ಮಾತನಾಡಿ, ಕುಷ್ಠರೋಗದ ಬಗ್ಗೆ ಭಯಬೇಡ, ಎಚ್ಚರಿಕೆ ಇರಲಿ ಎಂದು ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿ ಸ್ನೇಹ, ಮಂಜುಳಾ, ಪ್ರಕಾಶ್, ಮಧು ಕರಿಯಣ್ಣ, ಮಧುರ, ಬಿಂದು ಮತ್ತು ಇತರರು ಉಪಸ್ಥಿತರಿದ್ದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟು, ನೆಲ ಬಾಡಿಗೆಗೆ ಇದೆ**
ಸೈಟ್ ಅಳತೆ 44x60 = 2640 ಸ್ಕೇರ್‌ಫೂಟ್. ಪ್ಲಾಟ್ ನಂ.6, ನೂತನ ಕಾಲೇಜ್ ಮೇನ್ ರೋಡ್ ಬಸವೇಶ್ವರ ಸರ್ವೀಸ್ ಸೆಂಟರ್ ಪಕ್ಕ, ದಾವಣಗೆರೆ.
ಸಂಪರ್ಕಿಸಿಬೇಕಾದ ಮೊಬೈಲ್ ನಂ.
81056 01900, 63627 53030

**ತಕ್ಷಣ ಬೇಕಾಗಿದ್ದಾರೆ**
ಡಿಟಿಡಿಸಿ ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ.
ವಯೋಮಿತಿ : 25 ರಿಂದ 30 ವರ್ಷ.
97385 23711

**ಮನೆ ಬಾಡಿಗೆಗೆ ಇದೆ**
ಜೆ.ಹೆಚ್. ಪಟೇಲ್ ಬಡಾವಣೆಯ ಪೋದಾರ್ ಇಂಟರ್‌ನ್ಯಾಷನಲ್ ಸ್ಕೂಲ್ ಎದುರಿನ ಪಾರ್ಕ್ ಪಕ್ಕದಲ್ಲಿ 20x30 ಅಳತೆಯಲ್ಲಿರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
98442 94446

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**EC / ಇಸಿ, E-swathu & Khatha Change**
Building Licence
Call :
96118-66449

**ವಯೋವೃದ್ಧರ ಆರೈಕೆ ಕೇಂದ್ರ**
ನಮ್ಮಲ್ಲಿ ವೃದ್ಧ ದಂಪತಿಗಳು ವಯೋವೃದ್ಧರುಗಳನ್ನು ನಮ್ಮಲ್ಲಿ ಇರಿಸಿಕೊಂಡು ಊಟ, ವಸತಿಯೊಂದಿಗೆ ನೋಡಿಕೊಳ್ಳಲಾಗುವುದು. ಸ್ಪೆಷಲ್ ರೂಂಗಳಿರುತ್ತವೆ.
89711 92936, 97410 64663

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 30 ವರ್ಷ ವಯಸ್ಸಿನ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ಗ್ರಾಮಾಂತರದವರಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಮನೆ ಲೀಸ್‌ಗೆ**
#1846/178 ಗ್ರೌಂಡ್ ಫ್ಲೋರ್, 2 BHK, ಕಾರ್ನರ್ ಮನೆ, ವಿನಾಯಕ ಬಡಾವಣೆ, ವಿದ್ಯಾನಗರ, ಸೌಜನ್ಯ ಪಾರ್ಕ್ ಹತ್ತಿರ, ಲೀಸ್‌ಗೆ ಇದೆ.
ಫೋ. : 98864 11116

**ಮನೆ ಲೀಸ್‌ಗೆ ಇದೆ**
2BHK 1ನೇ ಮಹಡಿ
1 BHK 1ನೇ ಮಹಡಿ ಮನೆ ಲೀಸ್‌ಗೆ
1 BHK 2ನೇ ಮಹಡಿ ಮನೆ ಬಾಡಿಗೆಗೆ ಇದೆ.
#239/7-62. ಶಾಮನೂರು, ಡಾಲರ್ಸ್‌ಕಾಲೋನಿ, ದಾವಣಗೆರೆ.
91108 95861, 86607 04578

**ಬೇಕಾಗಿದ್ದಾರೆ**
ವಾರ್ಡ್ ಬಾಯ್ ಅಥವಾ ಗರ್ಲ್, ಎಸ್,ಎಸ್,ಎಲ್,ಸಿ, ಅಥವಾ ಪಿ,ಯು,ಸಿ ಆದವರು
77604 84814
98865 67791

**ಮನೆ ಬಾಡಿಗೆಗಿದೆ**
2ನೇ ಮಹಡಿಯಲ್ಲಿನ ಸಿಂಗಲ್ ಬೆಡ್ ರೂಂ ಅಟ್ಯಾಚ್, ಸೃಷ್ಟಿ ಆಸ್ಪತ್ರೆ ಎದುರುಗಡೆ, ಹದಡಿ ರಸ್ತೆ, ದಾವಣಗೆರೆ.
97431 21419
83103 12057

**ಹೋಟೆಲ್ ಫುಡೀಸ್**
ಚರ್ಚ್ ರೋಡ್, ತೊಗಟವೀರ ಕಲ್ಯಾಣ ಮಂಟಪ ಹತ್ತಿರ,
ಬೇಕಾಗಿದ್ದಾರೆ
ವೆಯ್ಟರ್, ಲೇಡಿ ಕ್ಲೀನರ್
98861 56688

**ಖಾಲಿ ಜಾಗ / ಕಟ್ಟಡ ಖರೀದಿಗೆ ಬೇಕಾಗಿದೆ**
ದಾವಣಗೆರೆಯ ಪ್ರತಿಷ್ಠಿತ ದಿ ಪಾವಗಡ ಸೌಹಾರ್ದ ವಿವಿಧೋದ್ದೇಶ ಸಹಕಾರ ನಿ., ಸಂಸ್ಥೆಗೆ 30x40 ಅಥವಾ 30x50 ಅಡಿ ಅಳತೆಯ ಸೈಟು ಅಥವಾ ಕಟ್ಟಡ ಖರೀದಿಗೆ ಬೇಕಾಗಿದೆ. ಸಂಪರ್ಕಿಸಿ
88842 18143, 63609 09309, 98442 46233

**ಮಾರಾಟಕ್ಕೆ**
* ಶಕ್ತಿನಗರ(ರಾಜೇಂದ್ರ ಬಡಾವಣೆ) ದಕ್ಷಿಣ ದಿಕ್ಕಿನ ಪೂರ್ವ ಬಾಗಿಲು,3 ಫ್ಲೋರ್ ಇರುವ ಮನೆ 20×30, * ದುರ್ಗಾಂಬಿಕಾ ಬಡಾವಣೆ ನಿಟ್ಟುವಳ್ಳಿ ಸೈಟ್ (ಪೂರ್ವ) 20x30, * ಬನಶ್ರೀ ಲೇಔಟ್ (ಶಾಮನೂರು) ಸೈಟ್ (ಉತ್ತರ) 30x50, 20x30. * ಲಕ್ಷ್ಮಿ ಲೇಔಟ್ (ಜಯನಗರ) ಸೈಟ್ (ಪೂರ್ವ)25×35
78996 36597, 99165 25828

**ಸೈಟುಗಳು ಮಾರಾಟ ಇವೆ**
ಸಿದ್ಧವೀರಪ್ಪ 33x50 ಪೂರ್ವ, ವಿದ್ಯಾನಗರ 30x66 ಉತ್ತರ, ರಂಗನಾಥ ಬಡಾವಣೆ 40x80 ಪೂರ್ವ, ವಿನಾಯಕ 30x80 ದಕ್ಷಿಣ.
ಏಜೆಂಟರು, ಯಲ್ಲೋಜಿರಾವ್.ಎಸ್
97418 11694

**ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧರು, ಬೆಡ್ ರಿಡನ್ ಪೇಷೆಂಟ್‌ಗಳಿಗೆ ಡೈಪರ್ ಚೇಂಜ್, ಸ್ನಾನ ಮಾಡಿಸುವುದು ಈ ಸೇವೆಗಳನ್ನು ನೀಡಿ ಊಟ ವಸತಿಯೊಂದಿಗೆ ನಮ್ಮಲ್ಲಿ ಇರಿಸಿಕೊಂಡು ನೋಡಿಕೊಳ್ಳಲಾಗುವುದು.
89711 92936, 97410 64663

**WANTED**
* Warden (Preferably Ex-army)
* Physical Education Teacher (MP.Ed.)
* Security Guard (Preferably Ex-army)
ANMOL PUBLIC SCHOOL
CONTACT
96207 68987, 94483 91963

**Single Room For Rent**
J.H. Patel Badavane, Near Podar International School
95358 41058
88617 11072

**ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ**
ಅಲರ್ಟ್ ಸೆಕ್ಯೂರಿಟಿ ಡಿಟೆಕ್ಟಿವ್ ಫೋರ್ಸ್
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ಉತ್ತಮ ವೇತನ ಹಾಗೂ ಇಎಸ್‌ಐ ಮತ್ತು ಪಿ.ಎಫ್ ಸೌಲಭ್ಯ ಇರುತ್ತದೆ.
ವಿಳಾಸ : ಶಿವಪ್ಪ ಸರ್ಕಲ್, 8ನೇ ಕ್ರಾಸ್, ನಿಟ್ಟುವಳ್ಳಿ ಮೇನ್ ರೋಡ್, ದಾವಣಗೆರೆ.
70012 87756, 95351 56531
97409 77785

**ಗೋಡೌನ್ ಬಾಡಿಗೆಗೆ ಇದೆ**
ನಿಟುವಳ್ಳಿ ಹೊಸ ಬಡಾವಣೆ, HKR ಸರ್ಕಲ್ ಹತ್ತಿರ, 25x60 ಅಳತೆಯ 3 ಗೋಡೌನ್
91486 76357
94813 60192

**REQUIRED**
TELLECALLERS ONLY FOR LADIES FOR SCIENCE PU COLLEGE
LOCATION : DAVANGERE, ANJANEYA BADAVANE BIET ROAD
78999 905792
87628 67557

**WANTED**
Civil Engineers Only for Ladies
Contact :
Ph. : 80880 50729
74060 21863

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕುಕ್ ಕಮ್ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ.
ಸಂಬಳ :15000/-
ಊಟ, ರೂಂ ಉಚಿತ. 12 ಗಂಟೆ ಕೆಲಸ. ಸಂಪರ್ಕಿಸಿ.
97400 98004, 97400 98047

**ಮನೆಯಲ್ಲೇ ಕುಳಿತು**
ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೊರಿಯರ್ ಸೌಲಭ್ಯವಿದೆ)
87490 98879

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
ಫೋ. : 88920 08800

**ಬೇಕಾಗಿದ್ದಾರೆ**
ಎಂಸಿಸಿ 'ಎ' ಬ್ಲಾಕ್ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
99729 11344

**ಬೆಳ್ಳಿ ಫೋಟೋಗಳು ದೊರೆಯುತ್ತವೆ**
ಮದುವೆ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳಿಗೆ ಬೆಳ್ಳಿ ದೇವರ ಮೂರ್ತಿಗಳ ಫೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮೀ, ಸರಸ್ವತಿ, ಕನ್ನಿಕಾಪರಮೇಶ್ವರಿ, ಸತ್ಯನಾರಾಯಣ ಸ್ವಾಮಿ, ಧರ್ಮಸ್ಥಳ ಮಂಜುನಾಥ ಸ್ವಾಮಿ, ಶಿವ ಪಾರ್ವತಿ, ಮಂತ್ರಾಲಯ ರಾಘವೇಂದ್ರ ಸ್ವಾಮಿ, ಆಂಜನೇಯ ಸ್ವಾಮಿ, ಶಿರಡಿ ಸಾಯಿಬಾಬಾ, ಈಶ್ವರ ಲಿಂಗ, ಮೈಲಾರ ಲಿಂಗೇಶ್ವರ, ವೀರಭದ್ರ ಸ್ವಾಮಿ, ಚಾಮುಂಡೇಶ್ವರಿ, ರೇಣುಕಾ ಯಲ್ಲಮ್ಮ, ಗುರು ಕೊಟ್ಟೂರೇಶ್ವರ ಸ್ವಾಮಿ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಮರುಳಸಿದ್ದೇಶ್ವರ ಸ್ವಾಮಿ ಸಣ್ಣ ಪ್ಯೂರ್ ಸಿಲ್ವರ್ 999 ಬೆಳ್ಳಿ ಫೋಟೋಗಳು ರೂ. 95, 160 ರಿಂದ 260 ರೂ.ಗಳಿಗೆ ಸಿಗುತ್ತವೆ. ಅಂಗಡಿ ಪ್ರಾರಂಭಿಸಲು ಪೂಜೆ ಮಾಡುವ ವೈಟ್ ಮೆಟಲ್‌ನ ಸರ್ವಾಲಂಕಾರದ (ಲೈಟಿಂಗ್) ಫೋಟೋಗಳು ದೊರೆಯುತ್ತವೆ. ಮದುವೆ ಇತ್ಯಾದಿ ಸಮಾರಂಭಗಳಿಗೆ 1 ಗ್ರಾಂ. ಗೋಲ್ಡ್‌ನಲ್ಲಿ ಡಾಬು, ವಂಕಿ, ಹಾರಗಳು ಸಿಗುತ್ತವೆ ಮತ್ತು ಅನುಕೂಲಕರವಾದ ಗಿಫ್ಟ್‌ಗಳಿವೆ.
ಸ್ಥಳ : ಲಕ್ಷ್ಮೀ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್ಸ್
ಮಳಿಗೆ ನಂ. 34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.
ಮೊ. : 99451 59582

**ಬೇಕಾಗಿದ್ದಾರೆ**
MCC 'B' Block ನಲ್ಲಿ ಕೆಫೆ ಕ್ಲೀನಿಂಗ್ ಕೆಲಸಕ್ಕೆ ಹೆಂಗಸರು ಬೇಕಾಗಿದ್ದಾರೆ.
ಸಮಯ 9:00 ರಿಂದ 6:00,
ಸಂಬಳ - 8000/-
82966 72274

**ಸೈಟುಗಳು ಮಾರಾಟಕ್ಕಿವೆ**
ಹೈಟೆಕ್ ಹಾಸ್ಪಿಟಲ್ ಹಿಂಭಾಗ ಪಾಮೇನಹಳ್ಳಿ ಪಕ್ಕದಲ್ಲಿ ಫೈನಲ್ ಅಪ್ರೂವ್ಡ್ ಆಗಿರುವ 20x30, ಪಶ್ಚಿಮ 6 ಸೈಟುಗಳು ಮತ್ತು 20x44 ಪೂರ್ವ 2 ಸೈಟುಗಳು ಮಾರಾಟಕ್ಕಿವೆ. ದರ 1750 ಅಡಿಗೆ ಆಸಕ್ತಿಯುಳ್ಳವರು ಸಂಪರ್ಕಿಸಿ.
97402 58276

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ಜರೇಕಟ್ಟೆ
ಫೋ.: 89049 07242

**ಬೇಕಾಗಿದ್ದಾರೆ**
ಫೀಲ್ಡ್ ಸರ್ವೀಸ್ ಟೆಕ್ನೀಷಿಯನ್ ವಿದ್ಯಾರ್ಹತೆ : ಐಟಿಐ ಫಿಟ್ಟರ್, ಡಿಪ್ಲೋಮಾ ಇನ್ ಮೆಕ್ಯಾನಿಕಲ್, ಸ್ಯಾಲರಿ ನೆಗೋಸಿಯೋಬಲ್, ಸಂಪರ್ಕಿಸಿ : ಅನು ಏಜೆನ್ಸೀಸ್, ಕಾವೇರಿ ಫಾರ್ಮಾ ಎದುರು, ವಾಸವಿ ರೋಡ್, ಪ್ರಜಾವಾಣಿ ಆಫೀಸ್ ಕೆಳಗೆ, ದಾವಣಗೆರೆ.
ಫೋ. : 98442 47494

**ಗೋಡೌನ್ ಬಾಡಿಗೆಗೆ ಇದೆ**
35x26 ದೊಗ್ಗಳ್ಳಿ ಕಾಂಪೌಂಡ್, ಕೆ.ಆರ್. ರೋಡ್, ದಾವಣಗೆರೆ.
94487 54140
98452 55995

**ಕೆಲಸಕ್ಕೆ ಬೇಕಾಗಿದ್ದಾರೆ**
ITI/Electrical/Electronic Pass/ Fail ಆಗಿರುವ ಹುಡುಗ / ಹುಡುಗಿಯರು ಬೇಕಾಗಿದ್ದಾರೆ.
Electro Next
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.

**ಬೇಕಾಗಿದ್ದಾರೆ**
S.N. ENTERPRISES
ನಮ್ಮಲ್ಲಿ ಕೆಲಸ ಮಾಡಲು ಯುವಕ-ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳದೊಂದಿಗೆ (Unmarried Only)
P.J. Extn., Davanagere
78992 96668, 85489 01454

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**AUDITION**
ಕಿರುಚಿತ್ರ, ಸರಣಿ ಕಿರುಚಿತ್ರ
ಧಾರಾವಾಹಿ
ಚಲನಚಿತ್ರ
ಹಿರೋ, ಹಿರೋಯಿನ್ಸ್,
ಕಲಾವಿದರು.
89716 53672
76769 43244

**ತಕ್ಷಣ ಬೇಕಾಗಿದ್ದಾರೆ**
ಬಾರ್ & ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಕ್ಯಾಪ್ಟನ್, ಕ್ಯಾಷಿಯರ್, ಹಾಗೂ ಸ್ಟೀವರ್ಡ್ (ವೇಟರ್ಸ್) ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆಕರ್ಷಕ ವೇತನ ಕೊಡಲಾಗುವುದು. ಸಂಪರ್ಕಿಸಿ.
88846 30532, 91480 16466
96060 96698

**SITE FOR SALE**
# 60, 12th Cross, Anjaneya Badavane, MCC B Block, Davangere. Google location 14.4495078, 75.9105267 Size 35X38ft, south and north road, 65 Lakhs Rupees non negotiable, A/C payment only
90361 10961

**KHB ಸೈಟುಗಳು ಮಾರಾಟಕ್ಕೆ**
ಕರ್ನಾಟಕ ಹೌಸಿಂಗ್ ಬೋರ್ಡ್ (ತುಂಗಭದ್ರಾ ಬಡಾವಣೆ) ದಾವಣಗೆರೆಯಲ್ಲಿ 30X40 ಅಳತೆಯ ದಕ್ಷಿಣ ದಿಕ್ಕಿನ ಸೈಟುಗಳು ಫಲಾನುಭವಿಗಳಿಂದ ನೇರ ಮಾರಾಟ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
63605 67975

**WANTED FOR RECEPTIONIST**
Age 21 - 27,
Address : Hairpoint Unisex salon
2nd Floor, No 2988-2A,2B. 7th Main, 3rd Cross Rd, MCC 'B' Block, Davanagere. Karnataka 577004.
Contact no.
97386 64400, 91483 19342

**ಮಳಿಗೆ ಬಾಡಿಗೆಗೆ ಇದೆ**
ಅಶೋಕ ರೋಡ್ 1st ಫ್ಲೋರ್ ಮತ್ತು ಹಿಂಬದಿಯ ಮಳಿಗೆ, ಈಶ್ವರ ರೇಡಿಯೋ & ಟಿವಿ ಎದುರು, ಜಯದೇವ ಸರ್ಕಲ್ ಹತ್ತಿರ D/O No. 407, ಮಳಿಗೆ ವಿಸ್ತೀರ್ಣ 1st ಫ್ಲೋರ್ ವಿಸ್ತೀರ್ಣ 10x100, ಹಿಂಬದಿಯ ಮಳಿಗೆ 10x50.
ಸಂಪರ್ಕಿಸಿ : ಉಲ್ಲಾಸ್
85498 16336

**ಸೈಟುಗಳು ಮತ್ತು ಮನೆಗಳು ಮಾರಾಟಕ್ಕೆ ಇವೆ**
ಮಹಾಲಕ್ಷ್ಮಿ 40x30 ಪೂರ್ವ, ಕುಂದವಾಡ ಕೆರೆ ಪಕ್ಕದಲ್ಲಿ 30x45 ಪಶ್ಚಿಮ, ನಿಜಲಿಂಗಪ್ಪ ಬಡಾವಣೆ 40x60 ದಕ್ಷಿಣ, ಬಸವೇಶ್ವರ 50x60 ದಕ್ಷಿಣ.
ಏಜೆಂಟರು, ಯಲ್ಲೋಜಿರಾವ್. ಎಸ್
97418 11694

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ನೇರ ಪರೀಕ್ಷೆಗಳು**
SSLC, PUC, BA B.Com, BBA, MBA (ALL) B.Tech, Diploma, ITI, NTC,
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
ಪಾರ್ಟ್ ಟೈಂ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ 6000 ವೇತನ.
ಫೋ. : 86602 35013

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or Any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ. ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆಯಲ್ಲಿ 30x50 ಪೂರ್ವ 40x50 (ಪೂರ್ವ -ಉತ್ತರ ಕಾರ್ನರ್) 60x30 ಕಮರ್ಷಿಯಲ್ 40x60 ಪೂರ್ವ 30x40 ಪಶ್ಚಿಮ
95385 65909

**ಬೇಕಾಗಿದ್ದಾರೆ**
ಬ್ರ್ಯಾಂಡೆಂಡ್ ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
98867 57688

**ಮನೆ ಲೀಸ್‌ಗೆ ಇದೆ**
2BHK ಮೊದಲನೇ ಮಹಡಿ ಸಿದ್ದಗಂಗಾ ಬಡಾವಣೆ ಎಸ್.ಎಸ್. ಆಸ್ಪತ್ರೆ ಹಿಂಭಾಗ
70903 58242

# ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಮುಂದಾಗಬೇಕು



ದಾವಣಗೆರೆ, ಫೆ.14- ಸರ್ಕಾರಿ ಶಾಲೆಗೆ ಹೆಚ್ಚಿನ ಮಕ್ಕಳು ಬರುವಂತಾಗಬೇಕು. ಸೌಲಭ್ಯ ಇಲ್ಲದ ಶಾಲೆಗಳ ಅಭಿವೃದ್ಧಿ ಆಗಬೇಕು ಎಂದು ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್ ಹೇಳಿದರು.

ಪಾಲಿಕೆಯ 9ನೇ ವಾರ್ಡ್‌ನ ಗುಲಿಸ್ಥಾನ್ ಮುಸ್ತಫಾ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಬಹುಮಾನ ವಿತರಣೆ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕೂಲಿ ಕಾರ್ಮಿಕರು, ಬಡವರು, ಹಿಂದುಳಿದ ವರ್ಗಗಳ ಜನರ ಮಕ್ಕಳೇ ಹೆಚ್ಚಾಗಿ ಸರ್ಕಾರಿ ಶಾಲೆಗಳಿಗೆ ಬರುವುದು. ಇನ್ನೂ ಹೆಚ್ಚಿನ ಸೌಕರ್ಯಗಳನ್ನು ನೀಡಿದರೆ ಖಾಸಗಿ ಶಾಲೆಗಳಿಗಿಂತ ಉತ್ತಮ ಶಿಕ್ಷಣ ಇಲ್ಲಿ ಸಿಗುತ್ತದೆ. ಆದ್ದರಿಂದ ರಾಜ್ಯ ಸರ್ಕಾರ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

**ಕಾಮಗಾರಿ ಪರಿಶೀಲನೆ:** ಇನ್ನು ಈ ವಾರ್ಡ್‌ನಲ್ಲಿ ಕೈಗೊಂಡಿರುವ ಕಾಮಗಾರಿಗಳ ಕುರಿತಂತೆ ಗಡಿಗುಡಾಳ್ ಮಂಜುನಾಥ್ ಪರಿಶೀಲಿಸಿದರು. ಶಾಲೆ ಸಮೀಪದಲ್ಲಿ ಇದ್ದಂತಹ ಚರಂಡಿಯಲ್ಲಿ ತ್ಯಾಜ್ಯ ನೀರು ಹರಿಯುತ್ತಿರುವುದು ಗಮನಕ್ಕೆ ಬಂದಿತು. ಶಾಲಾ ಮಕ್ಕಳು, ಜನರು ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿ ನಿರ್ಮಾಣವಾಗಿದೆ. ಮಕ್ಕಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂಬ ಆತಂಕ ಇದೆ ಎಂದು ಸ್ಥಳೀಯರು ತಿಳಿಸಿದರು.

ಜಟ್ಟಿ ಯಂತ್ರ ತಡವಾಗಿ ಬರುತ್ತಿರುವುದರಿಂದ ತ್ಯಾಜ್ಯ ನೀರು ಹರಿಯುತ್ತಲೇ ಇರುತ್ತದೆ. ಹಾಗಾಗಿ ಸಂಬಂಧಪಟ್ಟವರು ಹಾಗೂ ಮೇಯರ್ ಈ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಗಡಿಗುಡಾಳ್ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಕೆ. ಜಾಕಿರ್ ಅಲಿ, ಶಫೀಕ್ ಪಂಡಿತ್, 9ನೇ ವಾರ್ಡಿನ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ದಾದಾಪೀರ್ ಮೊಟ್ಟೆ, ಕೊಟ್ಟೂರು ಇಮ್ರಾನ್ ಹಾಗೂ ಗಿಡ್ಡು ಮತ್ತಿತರರು ಉಪಸ್ಥಿತರಿದ್ದರು.

# ಕೇಂದ್ರ ಬಜೆಟ್ ವಿರೋಧಿಸಿ ಕಮ್ಯುನಿಸ್ಟ್ ಪ್ರತಿಭಟನೆ




ದಾವಣಗೆರೆ, ಫೆ. 14- ಕೇಂದ್ರ ಸರ್ಕಾರದ ಜನವಿರೋಧಿ ಬಜೆಟ್, ಅದಾನಿಯ ಹಗರಣಗಳ ಆರೋಪ ಕುರಿತು ಸಮಗ್ರ ತನಿಖೆ ನಡೆಸುವಂತೆ ರಾಷ್ಟ್ರಪತಿಗಳನ್ನು ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮಂಡಳಿ ವತಿಯಿಂದ ನಗರದ ಗಾಂಧಿ ವೃತ್ತದಲ್ಲಿ ಇಂದು ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ ಸಹ ಕಾರ್ಯದರ್ಶಿ ಆವರಗೆರೆ ಹೆಚ್.ಜಿ. ಉಮೇಶ್ ಅವರು, ಕೇಂದ್ರ ಸರ್ಕಾರದ ಪ್ರಸಕ್ತ ಸಾಲಿನ ಬಜೆಟ್ ಜನ ವಿರೋಧಿಯಾಗಿದ್ದು, ದೇಶ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಾದ ನಿರುದ್ಯೋಗ, ಬಡತನ, ಬೆಲೆಯೇರಿಕೆ ತಡೆಗಟ್ಟುವಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರು.

ಬಂಡವಾಳಶಾಹಿಗಳ ಹಾಗೂ ಕಾರ್ಪೊರೇಟ್ ವಲಯಗಳ ಹಿತಕಾಯುವುದೇ ಪ್ರಥಮ ಆದ್ಯತೆಯನ್ನಾಗಿಸಿಕೊಂಡಿರುವ ಬಿಜೆಪಿ ಸರ್ಕಾರ ಶಿಕ್ಷಣ, ಆರೋಗ್ಯ ಕ್ಷೇತ್ರಗಳ ಖಾಸಗೀಕರಣ ಮಾಡಲು ಮುಂದಾಗಿದ್ದು, ಈ ಕ್ಷೇತ್ರಗಳಿಗೆ ಅನುದಾನವನ್ನು ಸಹ ಕಡಿತಗೊಳಿಸಿದೆ. ಐಸಿಎಂಆರ್ ಲ್ಯಾಬ್ ಹಾಗು ನರ್ಸಿಂಗ್ ಕಾಲೇಜುಗಳನ್ನು ಖಾಸಗಿ ವಲಯಕ್ಕೆ ವಹಿಸಲು ನಿರ್ಧರಿಸಿದೆ ಎಂದು ಕಿಡಿಕಾರಿದರು.

ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಸುರಕ್ಷೆ, ಉದ್ಯೋಗ ವೇತನಗಳ ಬಗ್ಗೆ ದಿವ್ಯ ಮೌನ ವಹಿಸಿರುವ ಕೇಂದ್ರ ಸರ್ಕಾರ, ಗ್ರಾಮೀಣ ಉದ್ಯೋಗ ಖಾತ್ರಿಯಂತಹ ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡದೇ ನಿರ್ಲಕ್ಷ್ಯಿಸಿದೆ ಎಂದರು.

ಕೂಡಲೇ ಕೇಂದ್ರ ಸರ್ಕಾರ ಅದಾನಿ ಸಮೂಹ ಸಂಸ್ಥೆಗಳ ಮೇಲೆ ಮಾಡಲಾಗಿರುವ ಆರೋಪಗಳ ಬಗ್ಗೆ ಸುಪ್ರಿಂಕೋರ್ಟ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಗ್ರ ತನಿಖೆ ನಡೆಸುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಾರ್ಮಿಕ ಮುಖಂಡರಾದ ಆವರಗೆರೆ ಚಂದ್ರು, ಆನಂದರಾಜ್, ಆವರಗೆರೆ ವಾಸು, ಶಿವಕುಮಾರ್ ಆರ್. ಶೆಟ್ಟರ್, ಎಸ್.ಎಂ. ಸಿದ್ದಲಿಂಗಪ್ಪ, ನರೇಗಾ ರಂಗನಾಥ್, ಎಸ್. ಎಸ್. ಮಲ್ಲಮ್ಮ, ಸರೋಜ, ಯರಗುಂಟೆ ಸುರೇಶ್, ಶರಣಪ್ಪ ಶ್ಯಾಗಲೆ, ಉಮಾಪತಿ, ಚಮನ್ ಸಾಬ್ ಮತ್ತಿತರರು ಭಾಗವಹಿಸಿದ್ದರು.

# ಅಂಬೇಡ್ಕರ್‌ಗೆ ಅವಮಾನ : ಜೈನ್ ವಿವಿ ರದ್ಧತಿಗೆ ಆಗ್ರಹಿಸಿ ಪ್ರತಿಭಟನೆ



ದಾವಣಗೆರೆ, ಫೆ. 14- ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿದ ಜೈನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ರಾಷ್ಟ್ರೀಯ ದಲಿತ ಸೇನೆ ರಾಷ್ಟ್ರೀಯ ಅಧ್ಯಕ್ಷ ಹಮಾರಾ ಪ್ರಸಾದ್ ಅವರನ್ನು ದೇಶದ್ರೋಹಿ ಎಂದು ಘೋಷಿಸಿ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿ ಸಾಮಾಜಿಕ ಸಂಘರ್ಷ ಸಮಿತಿ ಜಿಲ್ಲಾ ಕಾರ್ಯಕರ್ತರು ನಗರದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಜಗತ್ತಿನ ಶ್ರೇಷ್ಠ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ವಿವಿಗಳು ಅಂಬೇಡ್ಕರ್ ಅವರನ್ನು ಸರ್ವ ಶ್ರೇಷ್ಠ ಜಾಗತಿಕ ಜ್ಞಾನಿಯೆಂದು ಪರಿಗಣಿಸಿವೆ. ಆದರೆ ಜ್ಞಾನದ ಕೇಂದ್ರವಾಗಬೇಕಾಗಿದ್ದ ಜೈನ್ ವಿವಿಯು ಜಾತಿಯ ಕೇಂದ್ರವಾಗಿದೆ. ಅಂಬೇಡ್ಕರ್‌ಗೆ ಅಪಮಾನ ಮಾಡಿದ ಜೈನ್ ವಿವಿ ಮಾನ್ಯತೆ ರದ್ದು ಮಾಡುವಂತೆ ಒತ್ತಾಯಿಸಿದರು.

ಜೈನ್ ವಿವಿಯ ಮತ್ತು ಅದರ ಸಂಸ್ಥೆಯ ಅಡಿಯಲ್ಲಿರುವ ಎಲ್ಲಾ ಶೈಕ್ಷಣಿಕ ಸಂಸ್ಥೆಗಳನ್ನು, ಶಾಲಾ-ಕಾಲೇಜುಗಳನ್ನು ಸರ್ಕಾರವೇ ವಶಪಡಿಸಿಕೊಳ್ಳುವ ಮತ್ತು ಜೈನ್ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರನ್ನು ದೇಶದ್ರೋಹಿಗಳೆಂದು ಪರಿಗಣಿಸಬೇಕು. ಅಲ್ಲದೇ ಅಂಬೇಡ್ಕರ್ ಅವರನ್ನು ಕೊಲ್ಲುತ್ತಿದೆ ಎಂದು ಘೋಷಿಸಿರುವ ಹರಾಮಾ ಪ್ರಸಾದ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿ.ಸಿ. ಪರಶುರಾಮ್, ಬಿ.ಎನ್. ನಾಗೇಶ್, ಗಾಂಧಿನಗರದ ತಿಪ್ಪೇರುದ್ರಪ್ಪ, ಕೆ. ರುದ್ರಪ್ಪ ಮತ್ತಿತರರು ಭಾಗವಹಿಸಿದ್ದರು.

# ಪಿಡಬ್ಲ್ಯೂಡಿ ಇಲಾಖೆ ಅಧಿಕಾರಿಗಳ ಮೇಲೆ ಎಫ್‌ಐಆರ್ ದಾಖಲು

**ಮಂಜೂರಾದ ಕಾಮಗಾರಿ ಹಣ ಬಿಡುಗಡೆಗೆ ಲಂಚಕ್ಕೆ ಬೇಡಿಕೆ ಇಟ್ಟ ಹಿನ್ನೆಲೆ**

ದಾವಣಗೆರೆ, ಫೆ.14- ಮಂಜೂರಾದ ಕಾಮಗಾರಿ ಹಣ ಬಿಡುಗಡೆಗೆ ಲಂಚಕ್ಕೆ ಬೇಡಿಕೆ ಇಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಒಳನಾಡು ಜಲಸಾರಿಗೆ ಇಲಾಖೆಯ ನಾಲ್ವರು ಅಧಿಕಾರಿಗಳ ವಿರುದ್ಧ ಮಂಗಳವಾರ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಸಹಾ ಯಕ ಕಾರ್ಯಪಾಲಕ ಅಭಿಯಂತರ ನರೇಂದ್ರಬಾಬು, ಸಹಾಯಕ ಇಂಜಿನಿಯರ್ ವೀರಪ್ಪ, ಕಾರ್ಯಪಾಲಕ ಇಂಜಿನಿಯರ್ ವಿಜಯಕುಮಾರ್, ಹಾಗೂ ಸೂಪರಿಂಟೆಂಡೆಂಟ್ ಎಂಜಿನಿಯರ್ ಜಗದೀಶ್ ಅವರ ಮೇಲೆ ಎಫ್‌ಐಆರ್ ದಾಖಲಾಗಿದೆ.

ಶ್ರೀರಾಮ ಸೇನೆಯ ಮಣಿ ಸರ್ಕಾರ್ ಅವರು ದೂರು ನೀಡಿ, ಆಡಿಯೋ ಹಾಗೂ ವಿಡಿಯೋ ಸಾಕ್ಷಿ ನೀಡಿದ್ದ ಹಿನ್ನೆಲೆಯಲ್ಲಿ ಮಂಗಳವಾರ ಇಲಾಖೆಗೆ ತೆರಳಿ ಸ್ಥಳ ಪರಿಶೀಲಿಸಿ, ಮಹಜರು ಮಾಡಿದ್ದಾರೆ.

ಮೇಲಿನ ಅಧಿಕಾರಿಗಳಿಗೂ ಸಹ ನಾವು ಈ ಹಣವನ್ನು ಕಳುಹಿಸಬೇಕಾಗಿರುತ್ತದೆ. ಕಡತಗಳಿಗೆ ಸಹಿ ಮಾಡಲು ಹಣವನ್ನು ಕೊಡಿ ಎಂದು ಗುತ್ತಿಗೆದಾರರಿಗೆ ಹೇಳಿರುತ್ತಾರೆ. ಈ ಎಲ್ಲಾ ಮಾಹಿತಿಯನ್ನು ಆಡಿಯೋ ಹಾಗೂ ವೀಡಿಯೋ ಮೂಲಕ ಇವರ ಕಛೇರಿಯಲ್ಲಿ ಲಂಚ ಪಡೆಯುವಾಗ ರೆಕಾರ್ಡ್ ಮಾಡಲಾಗಿದ್ದು, ಪಿ.ಸಿ. ಕಾಯ್ದೆ 1988 ರೀತ್ಯಾ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಎಫ್‌ಐಆರ್‌ನಲ್ಲಿ ದಾಖಲಿಸಲಾಗಿದೆ.

# ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳಿಗೆ ಶ್ರದ್ಧೆ, ಗುರಿ ಮುಖ್ಯ: ನಾರಾಯಣಸ್ವಾಮಿ



ದಾವಣಗೆರೆ, ಫೆ. 14- ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಶ್ರದ್ಧೆಯಿಂದ ಗುರಿ ಇಟ್ಟುಕೊಂಡು ವ್ಯಾಸಂಗ ಮಾಡಬೇಕು. ಮುಂಬರುವ ವಾರ್ಷಿಕ ಪರೀಕ್ಷೆಯಲ್ಲಿ ಧೈರ್ಯವಾಗಿ ಪರೀಕ್ಷೆ ಎದುರಿಸಿ, ಉತ್ತಮ ಅಂಕಗಳನ್ನು ಪಡೆದು ಸಮಾಜಕ್ಕೆ, ಕುಟುಂಬಕ್ಕೆ ಆದರ್ಶ ವಿದ್ಯಾರ್ಥಿಗಳಾಗಿ ಬೆಳೆಯಿರಿ ಎಂದು ಸರ್ಕಾರದ ಮುಖ್ಯ ಸಚೇತಕ ಡಾ. ವೈ.ಎ. ನಾರಾಯಣಸ್ವಾಮಿ ಹೇಳಿದರು.

ನಗರದ ಮೌಂಟ್ ಎವರೆಸ್ಟ್ ವಿದ್ಯಾಲಯದಲ್ಲಿ 2 ಲಕ್ಷ ರೂ. ವೆಚ್ಚದ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಇದೇ ವೇಳೆ ನಾರಾಯಣಸ್ವಾಮಿ ಅವರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು. ಡಾ.ವೈ.ಎ.ಎನ್. ಬಳಗದ ಸಾಂಬಶಿವಯ್ಯ, ಬಿ.ಎನ್. ರಾಮರೆಡ್ಡಿ, ಶಾಲಾ ಸಂಸ್ಥಾಪಕ ತ್ಯಾವಣಗಿ ವೀರಭದ್ರಸ್ವಾಮಿ, ಹಾಲೇಶಪ್ಪ, ಪದ್ದಪ್ಪ, ಶಾಲಾ ಮುಖ್ಯ ಶಿಕ್ಷಕಿ ನಯನ ವಿ. ಸ್ವಾಮಿ, ಓಂಕಾರಪ್ಪ, ಚೇತನಕುಮಾರ್ ಮತ್ತಿತರರು ಇದ್ದರು.

# ನಿಷ್ಪಕ್ಷಪಾತ ಚುನಾವಣೆ ನಡೆಸಲು ಒತ್ತಾಯಿಸಿ ಸಿಪಿಐಎಂ ಪ್ರತಿಭಟನೆ

ದಾವಣಗೆರೆ, ಫೆ. 14- ನಿಷ್ಪಕ್ಷಪಾತ ಚುನಾವಣೆ ನಡೆಸಬೇಕೆಂದು ಒತ್ತಾಯಿಸಿ, ಸಿಪಿಐಎಂ ವತಿಯಿಂದ ನಗರದ ಜಯದೇವ ವೃತ್ತದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಇದೇ ವೇಳೆ ಮಾತನಾಡಿದ ಸಿಪಿಐಎಂ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಹೆಚ್. ಆನಂದರಾಜ್ ಅವರು, ಬಿಜೆಪಿ ಆಡಳಿತದಲ್ಲಿ ಎಲ್ಲಾ ರಂಗಗಳಲ್ಲೂ ಕುಸಿತ ಮತ್ತು ಅರಾಜಕತೆ ತಾಂಡವವಾಡುತ್ತಿದೆ ಎಂದರು.

ತ್ರಿಪುರ ರಾಜ್ಯ ಶಿಕ್ಷಣ, ಆದಿವಾಸಿಗಳ ಆರೋಗ್ಯ, ಗ್ರಾಮೀಣಾಭಿವೃದ್ಧಿ, ಮಹಿಳಾ ಸಬಲೀಕರಣ, ಉದ್ಯೋಗದಲ್ಲಿ ಅತ್ಯಂತ ಮುಂದುವರೆದ ರಾಜ್ಯ. ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಕುಸಿತ ಕಾಣುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಐದು ವರ್ಷಗಳ ಹಿಂದೆ ತ್ರಿಪುರ ರಾಜ್ಯದಲ್ಲಿ ಎಡಪಕ್ಷಗಳ ನೈತೃತ್ವದ ಸರ್ಕಾರವಿತ್ತು. ಜನಪರವಾದ ಆಡಳಿತಕ್ಕೆ ಹೆಸರುವಾಸಿಯಾಗಿತ್ತು. ಆದಿವಾಸಿ ಬುಡಕಟ್ಟು ಜನತೆಯ ಸಮಗ್ರ ಅಭಿವೃದ್ಧಿಗಾಗಿ ಶಾಸಕಾಂಗದಷ್ಟೇ ಹಕ್ಕು ಬಾಧ್ಯತೆ, ಕರ್ತವ್ಯಗಳು ಮತ್ತು ವಿಶೇಷ ಬಜೆಟ್ಟನ್ನು ಜನಾಭಿವೃದ್ಧಿಗೆ ಬಳಸುತ್ತಾ, ಬುಡಕಟ್ಟು ಸ್ವಾಯತ್ತ ಮಂಡಳಿ ರಚಿಸಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಆಡಳಿತ ನಡೆಸಲಾಗುತ್ತಿತ್ತು.

ಭ್ರಷ್ಟಾಚಾರವಿಲ್ಲದ ಜನಪರವಾದ ಸರ್ಕಾರವೆಂದೇ ಅಂದಿನ ಮುಖ್ಯಮಂತ್ರಿ ಮಾಣಿಕ್ ಸರಕಾರ್ ಅವರ ಸರ್ಕಾರ ಹೆಸರುವಾಸಿಯಾಗಿತ್ತು ಎಂದು ತಿಳಿಸಿದರು.

ಉದ್ಯೋಗ ಖಾತ್ರಿ ಕಾಯ್ದೆ ಜಾರಿಗೆ ಕಾರಣರಾಗಿದ್ದು, ಎಡಪಕ್ಷಗಳು ಅಂತೆಯೇ ಉದ್ಯೋಗ ಖಾತ್ರಿಯನ್ನು ನೂರಕ್ಕೆ ನೂರರಷ್ಟು ಭ್ರಷ್ಟಾಚಾರವಿಲ್ಲದೆ ಜನತೆಗೆ ತಲುಪಿಸಿದ್ದು, ಅಂದಿನ ಎಡಪಕ್ಷಗಳ ಸರ್ಕಾರ, ಕೇಂದ್ರ ಸರ್ಕಾರ ಮಾತ್ರ ತ್ರಿಪುರ ರಾಜ್ಯಕ್ಕೆ ಕೊಡಬೇಕಾದಷ್ಟು ಅನುದಾನ ಕೊಡದೆ ಸತಾಯಿಸಿದ್ದು ಇದೇ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಸಿಪಿಐಎಂ ಪದಾಧಿಕಾರಿಗಳಾದ ಯು. ಬಸವರಾಜ್, ರೇಣುಕಮ್ಮ, ಮಾಳಮ್ಮ, ರಮೇಶ್, ಪರಶುರಾಮ್, ಶ್ರೀನಿವಾಸಮೂರ್ತಿ, ನೇತ್ರಾವತಿ ಮತ್ತಿತರರಿದ್ದರು.

# ಕೊಮಾರನಹಳ್ಳಿಯಲ್ಲಿಂದು ಶಂಕರಲಿಂಗ ಭಗವಾನ್‌ರ ಆರಾಧನಾ ಮಹೋತ್ಸವ

ಕೊಮಾರನಹಳ್ಳಿ ಗ್ರಾಮದ ಶಂಕರಲಿಂಗ ಭಗವಾನ್ ಸರಸ್ವತಿ ಪರಮಹಂಸ ಟ್ರಸ್ಟ್ ಆಶ್ರಯದಲ್ಲಿ ಇಂದಿನಿಂದ ಇದೇ ದಿನಾಂಕ 22ರವರೆಗೆ ಶಂಕಲಿಂಗ ಭಗವಾನ್‌ರ 70ನೇ ವಾರ್ಷಿಕ ಆರಾಧನಾ ಮಹೋತ್ಸವ ಆಯೋಜಿಸಲಾಗಿದೆ.

# ನಗರದಲ್ಲಿ ಇಂದು ಪೋತಿ ಸ್ಥಾಪನೆ

ದಾವಣಗೆರೆ ಸಿಟಿ ಭಾವಸಾರ ಕ್ಷತ್ರಿಯ ದೈವ ಮಂಡಳಿ ಆಶ್ರಯದಲ್ಲಿ ಶ್ರೀ ವಿಠೋಬ ದೇವರ ದಿಂಡಿ ಉತ್ಸವ ಇಂದಿನಿಂದ ಮೂರು ದಿನ ನಡೆಯಲಿದೆ. ಇಂದು ರಾತ್ರಿ 7 ಗಂಟೆಗೆ ಪೋತಿ ಸ್ಥಾಪನೆ (ಜ್ಞಾನೇಶ್ವರಿ ಗ್ರಂಥ ಸ್ಥಾಪನೆ) ಮತ್ತು ಭಜನೆ. ರಾತ್ರಿ 8 ಗಂಟೆಗೆ ಕೀರ್ತನೆ, ವೀಣಾ ಜಾಗರಣೆ ನಡೆಯಲಿದೆ. ನಾಳೆ ದಿನಾಂಕ 16ರ ಗುರುವಾರ ಬೆಳಿಗ್ಗೆ 5 ಗಂಟೆಗೆ ಕಾಕಡಾರತಿ, ಸಂಜೆ 4 ಗಂಟೆಗೆ ನಾಮಜಪ, 5 ಗಂಟೆಗೆ ಪ್ರವಚನ, ಸಂಜೆ 6 ಗಂಟೆಗೆ ಹರಿಪಾಠ ಭಜನೆ, ರಾತ್ರಿ 9 ಗಂಟೆಗೆ ಶ್ರೀ ಗುರು ಹ.ಭ.ಪ. ಯಶವಂತ್ ಭೋದಲೆ ಮಹಾರಾಜ್ ಪಂಢರಾಪುರ ಇವರಿಂದ ಕೀರ್ತನೆ ನಡೆಯಲಿದೆ.

# ಲಂಚ ಪಡೆಯುವ ವೇಳೆ ಲೋಕಾಯುಕ್ತ ಬಲೆ



ಹೂವಿನಹಡಗಲಿ, ಫೆ. 14 - ಇಲ್ಲಿನ ತಹಶೀಲ್ದಾರ್ ಕಚೇರಿಯ ಪ್ರಥಮ ದರ್ಜೆ ಸಹಾಯಕರೊಬ್ಬರು ಪಹಣಿ ತಿದ್ದುಪಡಿಗಾಗಿ ಲಂಚ ಪಡೆಯುತ್ತಿರುವಾಗ ಮಂಗಳವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ತಾಲ್ಲೂಕು ಕಚೇರಿಯ ಡಿಸಿಬಿ ವಿಭಾಗದ ಪ್ರಥಮ ದರ್ಜೆ ಸಹಾಯಕ ವೆಂಕಟಸ್ವಾಮಿ ಲೋಕಾಯುಕ್ತ ಬಲೆಗೆ ಬಿದ್ದ ಅಧಿಕಾರಿ. ಹಿರೇಕೊಳಚಿ ಗ್ರಾಮದ ನಿವೃತ್ತ ಶಿಕ್ಷಕ ಲಕ್ಕಪ್ಪ ಅಂಗಡಿ ವಡ್ಡರ ಅವರಿಂದ ಲಂಚದ ಹಣ ಪಡೆಯುತ್ತಿರುವಾಗ ಲೋಕಾಯುಕ್ತರಿಗೆ ಸಿಕ್ಕಿ ಬಿದ್ದಿದ್ದಾರೆ.

ಹಿರೇಕೊಳಚಿ ಗ್ರಾಮದ ವಡ್ಡರ ಚೌಡಮ್ಮ ಎಂಬುವವರಿಗೆ ಸೇರಿದ ಹಗರನೂರು ಕಂದಾಯ ಗ್ರಾಮದ ಸ.ನಂ. 330/ಎ. ಜಮೀನಿನ ಪಹಣಿ ತಿದ್ದುಪಡಿ ಮಾಡಲು ನ್ಯಾಯಾಲಯ ಆದೇಶಿಸಿತ್ತು. ನ್ಯಾಯಾಲಯ ನಿರ್ದೇಶನದ ಮೇರೆಗೆ ಪಹಣಿ ತಿದ್ದುಪಡಿ ಮಾಡಿ ಕೊಡುವಂತೆ ಜಿಲ್ಲಾಧಿಕಾರಿಗಳು ಆದೇಶಿಸಿದ್ದರು. ಆದರೂ ಕೆಲ ದಿನಗಳಿಂದ ಪಹಣಿ ತಿದ್ದುಪಡಿಗೆ ಸತಾಯಿಸಿದ್ದ ವೆಂಕಟಸ್ವಾಮಿ ಈ ಕೆಲಸ ಮಾಡಿಕೊಡಲು 70 ಸಾವಿರ ರೂ. ಲಂಚ ಕೇಳಿದ್ದ ಎಂದು ಆರೋಪಿಸಲಾಗಿತ್ತು. ಚೌಡಮ್ಮನವರ ಪುತ್ರ ನಿವೃತ್ತ ಶಿಕ್ಷಕ ಲಕ್ಕಪ್ಪ ವಡ್ಡರ್ ಅವರಿಂದ ಪಟ್ಟಣದ ಬಸ್ ನಿಲ್ದಾಣ ಹತ್ತಿರದ ಹೋಟೆಲ್ಲೊಂದರಲ್ಲಿ ಗುಮಾಸ್ತ 65 ಸಾವಿರ ರೂ. ಹಣ ಪಡೆಯುವಾಗ ಲೋಕಾಯುಕ್ತರು ದಾಳಿ ನಡೆಸಿ, ಆರೋಪಿಯನ್ನು ಬಂಧಿಸಿದ್ದಾರೆ. ಲೋಕಾಯುಕ್ತ ಇನ್‌ಸ್ಪೆಕ್ಟರ್‌ಗಳಾದ ಸಂಗಮೇಶ, ಸುರೇಶ್ ಕುಮಾರ್ ನೇತೃತ್ವದಲ್ಲಿ ಸಿಬ್ಬಂದಿ ದಾಳಿ ನಡೆಸಿದರು.

# ಕಚೇರಿಗಳಲ್ಲಿ ಶೋಧ

(1ನೇ ಪುಟದಿಂದ) ದಾಖಲೆಗಳನ್ನು ಪರಿಶೀಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಮೀಕ್ಷೆಯ ಅಂಗವಾಗಿ ಕಂಪನಿಯ ವಹಿವಾಟಿನ ವಿಭಾಗವಷ್ಟನ್ನೇ ಪರಿಶೀಲಿಸಲಾಗುತ್ತಿದೆ. ಅದರ ಪ್ರವರ್ತಕರು ಇಲ್ಲವೇ ನಿರ್ದೇಶಕರ ನಿವಾಸ ಹಾಗೂ ಇತರೆ ತಾಣಗಳಲ್ಲಿ ಶೋಧ ನಡೆಸಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಬಿಜೆಪಿ, ಬಿ.ಬಿ.ಸಿ. ಸಂಸ್ಥೆಯು ಭಾರತದ ವಿರುದ್ಧ ವಿಷಕಾರಿಯಾಗಿ ಸುದ್ದಿ ಪ್ರಸಾರ ಮಾಡುತ್ತಿದೆ ಹಾಗೂ ಪ್ರಚಾರ ಅಭಿ ಯಾನದಲ್ಲಿ ತೊಡಗಿದೆ ಎಂದು ಆರೋಪಿಸಿದೆ. ಬಿ.ಬಿ.ಸಿ. ವಿಶ್ವದಲ್ಲೇ ಅತ್ಯಂತ ಭ್ರಷ್ಟ ಸಂಘಟನೆಯಾ ಗಿದೆ. ಮಾಜಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರೂ ಸಹ ಬಿ.ಬಿ.ಸಿ. ನಿಷೇಧಿಸಿ ದ್ದರು ಎಂದು ಬಿಜೆಪಿ ವಕ್ತಾರ ಗೌರವ್ ಭಾಟಿಯ ಹೇಳಿದ್ದಾರೆ. ಬ್ರಿಟನ್ ಪ್ರಧಾನ ಮಂತ್ರಿಯಾಗಿದ್ದ ಮಾರ್ಗರೆಟ್ ಥ್ಯಾಚರ್ ಅವರು ಬಿ.ಬಿ.ಸಿ. ಯನ್ನು 'ಬೋಲ್ಶೆವಿಕ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್' ಎಂದು ಬಣ್ಣಿಸಿದ್ದರು ಎಂದೂ ಭಾಟಿಯಾ ನೆನಪಿಸಿದ್ದಾರೆ.

ಬಿ.ಬಿ.ಸಿ. ಕಚೇರಿಗಳ ಮೇಲೆ ತೆಗೆದುಕೊಂಡಿರುವ ಕ್ರಮವನ್ನು ಖಂಡಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ವಿನಾಶ ಕಾಲೇ ವಿಪರೀತ ಬುದ್ಧಿ ಎಂದಿದ್ದಾರೆ. ನಾವು ಅದಾನಿ ವಿರುದ್ಧ ಜೆ.ಪಿ.ಸಿ. ತನಿಖೆಗೆ ಒತ್ತಾಯಿಸುತ್ತಿದ್ದೇವೆ. ಆದರೆ, ಸರ್ಕಾರ ಬಿ.ಬಿ.ಸಿ. ಹಿಂದೆ ಬಿದ್ದಿದೆ ಎಂದು ರಮೇಶ್ ತರಾಟೆಗೆ ತೆಗೆದುಕೊಂಡಿದ್ದಾರೆ.

# ಡ್ರೋನ್‌ಗಳು ಕೀಟನಾಶಕಕ್ಕೆ ಸೀಮಿತವಲ್ಲ ಸಹಜ ಕೃಷಿಯಲ್ಲೂ ದೊಡ್ಡ ಪಾತ್ರ

**ಸಚಿವ ಸಿಂಧಿಯಾ**

ಇಂದೋರ್, ಫೆ. 14 – ಡ್ರೋನ್‌ಗಳು ಕೃಷಿ ವಲಯದಲ್ಲಿ ಕೇವಲ ಕೀಟನಾಶಕ ಸಿಂಪಡಣೆಗೆ ಸೀಮಿತವಲ್ಲ. ನೈಸರ್ಗಿಕ ಹಾಗೂ ಸಹಜ ಕೃಷಿಯಲ್ಲೂ ಇವು ದೊಡ್ಡ ಪಾತ್ರ ವಹಿಸಲಿವೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಖಾತೆ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿ ದ್ದಾರೆ. ಭಾರತದಲ್ಲಿ ಕಳೆದ ಒಂದೂವರೆ ವರ್ಷಗಳಲ್ಲಿ ಡ್ರೋನ್ ಉದ್ಯಮ 6-8 ಪಟ್ಟು ಬೆಳೆದಿದೆ. ಡ್ರೋನ್ ಮೂಲಭೂತ ಸೌಲಭ್ಯ ದೇಶದಲ್ಲಿ ಬಿರುಸಿನಿಂದ ಬೆಳೆಯುತ್ತಿದೆ. ಕೃಷಿ ವಲಯದಲ್ಲಿ ಡ್ರೋನ್ ಬಳಕೆ ಹೆಚ್ಚುತ್ತಿರು ವುದು ಜಿ20 ಕೃಷಿ ಕಾರ್ಯಕಾರಿ ಗುಂಪಿನಲ್ಲಿ ಪ್ರಮುಖ ವಾಗಿ ಪ್ರದರ್ಶಿಸಲ್ಪಟ್ಟಿದೆ ಎಂದು ಸಚಿವರು ತಿಳಿಸಿದ್ದಾರೆ.

2030ರ ವೇಳೆಗೆ ಜಾಗತಿಕವಾಗಿ ಡ್ರೋನ್‌ಗಳ ತಾಣವಾಗಲು ಭಾರತ ಗುರಿ ಹೊಂದಿದೆ. ಇದಕ್ಕಾಗಿ ಕೈಗಾರಿಕಾ ಸ್ನೇಹಿ ನೀತಿ ಹಾಗೂ ಉತ್ಪಾದನಾ ಉತ್ತೇಜನಾ ಯೋಜನೆ ಜಾರಿಗೆ ತರಲಾಗಿದೆ ಎಂದವರು ಹೇಳಿದರು.

ಡ್ರೋನ್‌ಗಳನ್ನು ಸಂಕುಚಿತವಾಗಿ ನೋಡಬಾರದು. ಅವುಗಳು ವೈವಿಧ್ಯ ಮಯ ಬಳಕೆಗೆ ಸೂಕ್ತವಾಗಿವೆ. ಕೃಷಿಯಲ್ಲಿ ಇವುಗಳ ಪಾತ್ರ ಕೇವಲ ಕೀಟನಾಶಕ ಸಿಂಪಡಣೆಗೆ ಸೀಮಿತವಲ್ಲ. ಇವುಗಳನ್ನು ಕೃಷಿ ಭೂಮಿ ಸಮೀಕ್ಷೆ ಹಾಗೂ ಮ್ಯಾಪಿಂಗ್‌ಗೆ ಬಳಸಬಹುದು ಎಂದವರು ಹೇಳಿದರು. ಜೈವಿಕ ಕೃಷಿಯಲ್ಲೂ ಇವುಗಳ ಪಾತ್ರ ಹೆಚ್ಚಾಗಿದೆ. ಸಹಜ ಕೃಷಿಯಲ್ಲೂ ಡ್ರೋನ್‌ಗಳ ಬಳಕೆಗೆ ಅವಕಾಶವಿದೆ. ಸರ್ಕಾರ ಸಾವಯವ ಹಾಗೂ ಸಹಜ ಕೃಷಿಗೆ ಉತ್ತೇಜನ ನೀಡುತ್ತಿದೆ ಎಂದವರು ಹೇಳಿದರು. ಪ್ರಸಕ್ತ ಕೃಷಿಯಲ್ಲಿ ಕೀಟನಾಶಕಗಳ ಸಿಂಪಡಣೆಗೆ ಮಾತ್ರ ಡ್ರೋನ್ ಬಳಸಲು ಅನುಮತಿ ನೀಡಲಾಗುತ್ತಿದೆ.

# ಬಜೆಟ್‌ನಲ್ಲಿ ಜಿಲ್ಲೆ ಅಭಿವೃದ್ಧಿಗೆ ಒತ್ತು ನೀಡಬೇಕು



ದಾವಣಗೆರೆ, ಫೆ.14- ಜಿಲ್ಲೆಯು ರಾಜ್ಯದ ಮಧ್ಯ ಭಾಗದಲ್ಲಿದ್ದು, ರಾಜ್ಯದ ಕೇಂದ್ರ ಬಿಂದುವಾಗಿರುತ್ತದೆ. ಆದ ಪ್ರಯುಕ್ತ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಮುಖ್ಯಮಂತ್ರಿಗಳು ನಾಳೆ ಮಂಡಿಸಲಿರುವ ಬಜೆಟ್‌ನಲ್ಲಿ ಒತ್ತು ನೀಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘವು ಒತ್ತಾಯಿಸಿ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ಜಿಲ್ಲೆಯಲ್ಲಿ 477 ಕೆರೆಗಳಿದ್ದು, ಇದರಲ್ಲಿ ಬೃಹತ್ ನೀರಾವರಿ, ಮಧ್ಯಮ ಹಾಗೂ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಡುವ ಕೆರೆಗಳಿದ್ದು, ಸುಮಾರು ವರ್ಷಗಳಿಂದ ಹೂಳು ತುಂಬಿದ್ದು, ಹಾಗಾಗಿ ಮಳೆಗಾಲದಲ್ಲಿ ನೀರು ವ್ಯರ್ಥವಾಗಿ ಹಳ್ಳ ಮತ್ತು ನದಿಗಳ ಮುಖಾಂತರ ಸಮುದ್ರ ಸೇರುತ್ತಿದೆ.

ಬೇಸಿಗೆಯಲ್ಲಿ ಸರ್ಕಾರದಿಂದ ಹೂಳು ತೆಗೆಸಿ, ಆ ಫಲವತ್ತಾದ ಮಣ್ಣನ್ನು ಅತಿ ಸಣ್ಣ ರೈತರಿಗೆ ಗೊಬ್ಬರಗಳಿಗೆ ಸಬ್ಸಿಡಿ ನೀಡುವ ಬದಲು ನೀಡುವಂತಾಗಬೇಕು.

ಪ್ರವಾಸೋದ್ಯಮ ಅಭಿವೃದ್ಧಿ ಪಡಿಸುವ ಸಲುವಾಗಿ ಏಷ್ಯಾ ಖಂಡದಲ್ಲಿಯೇ 2ನೇ ದೊಡ್ಡ ಸೂಳೆಕೆರೆಯನ್ನು ಅಭಿವೃದ್ಧಿ ಪಡಿಸಿ, ಜಮ್ಮು-ಕಾಶ್ಮೀರದಲ್ಲಿರುವ ದಾಲ್ ಸರೋವರವನ್ನು ಅಭಿವೃದ್ಧಿ ಪಡಿಸಿದಂತೆ ಅಭಿವೃದ್ಧಿ ಪಡಿಸಿದರೆ, ಪ್ರವಾಸಿ ತಾಣ ಮತ್ತು ಉದ್ಯೋಗ ಸೃಷ್ಟಿಯಾಗುತ್ತದಲ್ಲದೆ, ಸರ್ಕಾರಕ್ಕೆ ರಾಜಧನ ಸಂಗ್ರಹಿಸಿದಂತಾಗುತ್ತದೆ.

ಆಯಾ ತಾಲ್ಲೂಕಿನ ಬೆಳೆಗಳಿಗನುಗುಣವಾಗಿ ಗ್ರಾಮ ಪಂಚಾಯ್ತಿ ಹೋಬಳಿ ಮತ್ತು ತಾಲ್ಲೂಕು ಮಟ್ಟದಲ್ಲಿ ಬೆಳೆಗಳಾದ ಅಡಿಕೆ, ತೆಂಗು, ಮೆಕ್ಕೆಜೋಳ, ತರಕಾರಿ ಬೆಳೆಗಳ ಸಂಸ್ಕರಣಾ ಘಟಕ ಹಾಗೂ ಇಂಡಸ್ಟ್ರಿಗಳನ್ನು ಸರ್ಕಾರ ಘೋಷಣೆ ಮಾಡಬೇಕು. ಕಳೆದ ವರ್ಷ ಅತೀ ಹೆಚ್ಚು ಮಳೆ ಸುರಿದ ಪ್ರಯುಕ್ತ ಗ್ರಾಮೀಣ ಪ್ರದೇಶದ ರಸ್ತೆಗಳು ತುಂಬಾ ಹದಗೆಟ್ಟಿದ್ದು, ಅವುಗಳನ್ನು ಸರಿಪಡಿಸಿದಲ್ಲಿ ಅಪಘಾತದ ಮರಣಗಳನ್ನು ತಡೆದಂತಾಗುತ್ತದೆ ಹಾಗೂ ಸುರಕ್ಷಿತವಾಗಿ ಪ್ರಯಾಣಿಸಬಹುದು.

ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಕಟ್ಟಡಗಳು ಬಹಳ ಶಿಥಿಲಗೊಂಡಿದ್ದು, ಆಟದ ಮೈದಾನಗಳ ಕೊರತೆಯೂ ಇದೆ. ಹಾಗಾಗಿ ದೈಹಿಕ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್, ಜಿಲ್ಲಾ ಉಪಾಧ್ಯಕ್ಷ ರಾಂಪುರದ ಬಸವರಾಜ್, ಕಾರ್ಯಾಧ್ಯಕ್ಷ ಪರಶುರಾಮ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಅಣಬೇರು ಕುಮಾರಸ್ವಾಮಿ ಮತ್ತಿತರರು ಹಾಜರಿದ್ದರು

# ಬ್ಯಾಡ್ಮಿಂಟನ್ ತರಬೇತುದಾರರಾಗಿ ಕುಮಾರಸ್ವಾಮಿ ಆಯ್ಕೆ



ದಾವಣಗೆರೆ, ಫೆ. 14- ನಾಡಿದ್ದು ದಿನಾಂಕ 16 ರಿಂದ 20ರವರೆಗೆ ತೆಲಂಗಾಣದ ಪ್ರಗತಿ ಸ್ಟೇಡಿಯಂನಲ್ಲಿ ನಡೆಯಲಿರುವ 41ನೇ ರಾಷ್ಟ್ರೀಯ ಸಬ್ ಜ್ಯೂನಿಯರ್ ಬಾಲ್ ಬ್ಯಾಡ್ಮಿಂಟನ್ ಚಾಂಪಿ ಯನ್‌ಶಿಪ್‌ನಲ್ಲಿ ಕರ್ನಾಟಕ ರಾಜ್ಯ ತಂಡದ ಮುಖ್ಯ ತರಬೇತುದಾರರಾಗಿ ನಗರದ ರಾಷ್ಟ್ರೀಯ ಕ್ರೀಡಾಪಟು ಟಿ. ಕುಮಾ ರಸ್ವಾಮಿ ಇವರು ಸತತ ನಾಲ್ಕನೇ ಬಾರಿಗೆ ಆಯ್ಕೆಯಾಗಿದ್ದಾರೆ.

ಪತ್ರಿಕೆ ವಿತರಕರಾದ ಕುಮಾರಸ್ವಾಮಿ ಅವರಿಗೆ ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಜಿ.ಎಸ್. ರಾಜು, ಕಾರ್ಯದರ್ಶಿ ಉಮೇಶ್ ಗುಜ್ಜಾರ್, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಆರ್. ಚಂದ್ರು, ಪ್ರಧಾನ ಕಾರ್ಯದರ್ಶಿ ರಮೇಶ್ ವತನ್, ಖಜಾಂಚಿ ಅರುಣ್‌ಕುಮಾರ್, ಸಂಘಟನಾ ಕಾರ್ಯದರ್ಶಿ ಲಿಂಗಪ್ಪ ಅಭಿನಂದಿಸಿದ್ದಾರೆ.

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,**

**ಅಸಗೋಡು, ಜಗಳೂರು ತಾಲ್ಲೂಕು**

**ಪ್ರಕಟಣೆ**

ಮೇಲ್ಕಂಡ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆ ದಿನಾಂಕ 26.02.2023ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಅಸಗೋಡು ಕಟ್ಟಡದಲ್ಲಿ ನಡೆಯಲಿದೆ. ಈಗಾಗಲೇ ಚುನಾವಣಾ ವೇಳಾಪಟ್ಟಿಯನ್ನು ಸಂಘದ ಸದಸ್ಯರಿಗೆ ಕಳುಹಿಸಿದ್ದು, ಚುನಾವಣಾ ವೇಳಾಪಟ್ಟಿ ಅನ್ವಯ ನಾಮಪತ್ರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 18.02.2023, ನಾಮಪತ್ರ ಪರಿಶೀಲನೆ ದಿನಾಂಕ 19.02.2023, ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನಾಂಕ 20.02.2023, ಹೆಚ್ಚಿನ ಮಾಹಿತಿಗಾಗಿ ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಅಥವಾ ರಿಟರ್ನಿಂಗ್ ಆಫೀಸರ್ ಸಂಪರ್ಕಿಸಬಹುದು.

ಸ್ಥಳ : ಅಸಗೋಡು
ದಿನಾಂಕ : 11.02.2023

ರಿಟರ್ನಿಂಗ್ ಆಫೀಸರ್



ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ, ಜಿಲ್ಲಾ ಯೋಗ ಒಕ್ಕೂಟ ಹಾಗೂ ವಿವಿಧ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಮಂಗಳವಾರ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿತ್ತು. ರಿಂಗ್ ರಸ್ತೆಯ ಕ್ಲಾಕ್ ಟವರ್ ಬಳಿ ಜಾಥಾಕ್ಕೆ ಜಿಲ್ಲಾ ಆರೋಗ್ಯಾಧಿಕಾರಿ ನಾಗರಾಜ್ ಚಾಲನೆ ನೀಡಿದರು. ಜಿಲ್ಲಾ ಸರ್ವೇಕ್ಷಣಾಧಿಕಾರಿ ರಾಘವನ್, ಯೋಗ ಒಕ್ಕೂಟದ ವಾಸುದೇವ ರಾಯ್ಕರ್ ಇತರರು ಈ ಸಂದರ್ಭದಲ್ಲಿದ್ದರು.

## ಉಕ್ಕಡಗಾತ್ರಿಗೆ ಇಂದು ಹೆಚ್ಡಿಕೆ



ಸುಕ್ಷೇತ್ರ ಉಕ್ಕಡಗಾತ್ರಿ ಗ್ರಾಮಕ್ಕೆ ಇಂದು ಮಧ್ಯಾಹ್ನ 12 ಗಂಟೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ತಾ ಗ್ರಾಮಾಂತರ ಜೆಡಿಎಸ್ ಅಧ್ಯಕ್ಷ ಹಳ್ಳಿಹಾಳ್ ಪರಮೇಶ್ವರಪ್ಪ ಅವರು ಪಂಚರತ್ನ ರಥಯಾತ್ರೆ ಮೂಲಕ ಆಗಮಿಸಲಿದ್ದಾರೆ ಎಂದು ಗ್ರಾಮದ ಮುಖಂಡ ಎಸ್. ಸುರೇಶ್ ತಿಳಿಸಿದ್ದಾರೆ.

## ದಾವಣಗೆರೆ: ಇಂದು ನೀರು ಸರಬರಾಜಿನಲ್ಲಿ ವ್ಯತ್ಯಯ

ದೊಡ್ಡಬಾತಿ ಶುದ್ಧೀಕರಣ ಕೇಂದ್ರಕ್ಕೆ ವಿದ್ಯುತ್ ಪೂರೈಕೆಯಲ್ಲಿ ತೊಂದರೆ ಯಾಗಿರುವ ಹಿನ್ನೆಲೆಯಲ್ಲಿ ದಾವಣಗೆರೆ ನಗರಕ್ಕೆ ಇಂದು ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹನುಮಂತ ದೇವರ ಚಿತ್ರ ತೆರವು ಗೊಳಿಸಿದ ಹಿಂದೂಸ್ತಾನ್ ಏರೋನಾಟಿಕ್ಸ್

ಬೆಂಗಳೂರು, ಫೆ. 14 – ಹಿಂದೂಸ್ತಾನ್ ಲೀಡ್ ಇನ್ ಫೈಟರ್ ಟ್ರೈನರ್ (ಹೆಚ್.ಎಲ್.ಎಫ್.ಟಿ. -42) ನಲ್ಲಿದ್ದ ಹನುಮಂತ ದೇವರ ಚಿತ್ರವನ್ನು ಹಿಂದೂಸ್ತಾನ್ ಏರೋನಾಟಿಕ್ಸ್ ತೆಗೆದು ಹಾಕಿದೆ.

'ಬಿರುಗಾಳಿ ಬರಲಿದೆ' ಎಂಬ ಘೋಷಣೆ ಇರುವ ಹನುಮಂತ ದೇವರ ಚಿತ್ರವನ್ನು ಭಾನುವಾರದಂದು ಹೆಚ್.ಎಲ್.ಎಫ್.ಟಿ.ಯಲ್ಲಿ ಇರಿಸಲಾಗಿತ್ತು. ಆದರೆ, ಸೋಮವಾರ ಚಿತ್ರವನ್ನು ತೆಗೆಯಲಾಗಿದೆ.

ಈ ಹಿಂದೆ ಹೆಚ್.ಎಫ್. - 24 ಮಾರುತ್ ಎಂಬ ವಿಮಾನ ಇತ್ತು. ಆ ವಿಮಾನದಿಂದ ಚಿತ್ರ ಪಡೆಯಲಾಗಿದೆ. ಹನುಮಂತ ದೇವರ ಚಿತ್ರದಲ್ಲಿ ವಿಶೇಷತೆಯೇನೂ ಇಲ್ಲ ಎಂದು ಹೆಚ್.ಎ.ಎಲ್. ತಿಳಿಸಿದೆ.

ಇದೇ ಮೊದಲ ಬಾರಿಗೆ ಹೆಚ್.ಎ.ಎಲ್. ತನ್ನ ಹೆಚ್.ಎಲ್.ಎಫ್.ಟಿ. - 42 ಮಾದರಿಯನ್ನು ಏರೋ ಇಂಡಿಯಾದಲ್ಲಿ ಪ್ರದರ್ಶಿಸಿತ್ತು. ಇದು ಸಮರ ತರಬೇತಿಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

## ನಿವೃತ್ತ ಪ್ರಾಂಶುಪಾಲರಾದ ಬಿ.ಎಂ. ಚನ್ನಬಸವಯ್ಯ ನಿಧನ



ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ
ನಿವೃತ್ತ ಪ್ರಾಂಶುಪಾಲರಾದ

**ಶ್ರೀ ಬಿ.ಎಂ. ಚನ್ನಬಸವಯ್ಯ**

ಅವರು ದಿನಾಂಕ 14.02.2023ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 87 ವರ್ಷ ವಯಸ್ಸಾಗಿತ್ತು. ಪುತ್ರಿ, ಅಳಿಯ, ಮೊಮ್ಮಕ್ಕಳು, ಮರಿಮೊಮ್ಮಗ ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಕೆ.ಬಿ. ಬಡಾವಣೆ ಕಿರುವಾಡಿ ಲೇಔಟ್‌ನಲ್ಲಿರುವ ಅವರ ಸ್ವಗೃಹದಲ್ಲಿಡಲಾಗಿದ್ದು, ದಿನಾಂಕ 15.02.2023ರ ಬುಧವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆಯಲ್ಲಿರುವ ವೀರಶೈವ ರುದ್ರಭೂಮಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ. 98807 11120










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte